ಹುಬ್ಬಳ್ಳಿ-ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ವಿಜಯನಗರ, ಬೆಳಗಾವಿ, ದಾವಣಗೆರೆ, ರಾಯಚೂರ, ಯಾದಗಿರಿ

ಪಬ್ಲಿಕ್ ಫಾಸ್ಟ್

PUBLIC FAST

ಕನ್ನಡ ದಿನಪತ್ರಿಕೆ

E-mail : publicfast31@gmail.com

ಧ್ವನಿ ನಿಮ್ಮದು ಸಹಾಯ ನಮ್ಮದು... DAILY NEWS PAPER

ಸಂಪಾದಕರು : ಐಶ್ವರ್ಯ ಪಿ. ಉಪ ಸಂಪಾದಕರು : ಇಮ್ರಾನ್ ಹೆಬ್ಬಳ್ಳಿ

● ಸಂಪುಟ : 01 ● ಸಂಚಿಕೆ : 143 ● ದಿನಾಂಕ : 15-10-2026 ಗುರುವಾರ KNKAN/26/A2600 ಪುಟ : 4 ಬೆಲೆ : ರೂ. 2 Mobile : 9916890865

ಸಿಜೆಪಿ ಮುಖಂಡರಿಗೆ ಜೈಲು

ನವದೆಹಲಿ : ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಪ್ರತಿಭಟನೆನಡೆಸಲುನಿಷೇಧಿತಪ್ರದೇಶವಾದ ಜಂತರ್ ಮಂತರ್‌ಗೆ ನುಗ್ಗಲು ಯತ್ನಿಸಿದ 'ಕಾಕ್ರೋಚ್ ಜನತಾ ಪಾರ್ಟಿ'ಯ (ಸಿಜೆಪಿ) ಪ್ರಮುಖ ಮುಖಂಡರಾದ ಸೌರವ್ ದಾಸ್ ಮತ್ತು ಅಶೋತ್ ರಾಂಕಾ ಅವರಿಗೆ ದೆಹಲಿ ನ್ಯಾಯಾಲಯವು ಐದು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಮಂದಿರ್ ಮಾರ್ಗ್‌ನ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಸಿಜೆಐ ಮುಖಂಡರನ್ನು ಹಾಜರುಪಡಿಸಿದ ಬಳಿಕ ನ್ಯಾಯಾಲಯವು ಈ ಆದೇಶ ಹೊರಡಿಸಿದೆ. ದೆಹಲಿಯಲ್ಲಿ ಜಂತರ್ ಮಂತರ್ ಪ್ರದೇಶವನ್ನು ಅಧಿಕೃತ ಪ್ರತಿಭಟನಾ ಸ್ಥಳಗಳ ಪಟ್ಟಿಯಿಂದ ಕೈಬಿಟ್ಟು, ಅಲ್ಲಿ ಸಾರ್ವಜನಿಕ ಸಭೆ-ಪ್ರತಿಭಟನೆ ನಡೆಸುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿತ್ತು.

ಸಿಜೆಪಿ ಮುಖಂಡರಾದ ಸೌರವ್ ದಾಸ್, ಅಶೋತ್ ರಾಂಕಾ ಹಾಗೂ ಅಜಿಂಕ್ಯ ಶಿಂಧೆ ನೇತೃತ್ವದ ಕಾರ್ಯಕರ್ತರು ನಿಯಮವನ್ನು ಗಾಳಿಗೆತೂರಿ ಗೇಟ್ ಹತ್ತಿ ಜಂತರ್ ಮಂತರ್ ಒಳಗೆ ನುಗ್ಗಿದ್ದರು. ಅಲ್ಲದೆ, ತ್ರಿವರ್ಣ ಧ್ವಜ ಹಿಡಿದು "ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು" ಎಂದು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದರು. ಈ ಸಂಬಂಧ ದೆಹಲಿ ಪೊಲೀಸರು ಅವರನ್ನು ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆದಿದ್ದರು. ಈಹಿಂದೆದಾಖಲಾಗಿದ್ದಪ್ರಕರಣವೊಂದರಲ್ಲಿ ಜಾಮೀನು ಪಡೆದಿದ್ದ ಸಂದರ್ಭದಲ್ಲಿ, ಸಾರ್ವಜನಿಕ ಶಾಂತಿ ಕದಡುವ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ ಎಂದು ಮುಖಂಡರು ಮುಚ್ಚಳಿಕೆ (ಬಾಂಡ್) ಬರೆದುಕೊಟ್ಟಿದ್ದರು. ಆದರೆ, ಇದೀಗ ನಿಷೇಧಿತ ಜಂತರ್ ಮಂತರ್‌ಗೆ ಅತಿಕ್ರಮವಾಗಿ ಪ್ರವೇಶಿಸುವ ಮೂಲಕ ಅವರು ಆ ಬಾಂಡ್‌ನ ನಿಬಂಧನೆಗಳನ್ನು ಉಲ್ಲಂಘಿಸಿದ್ದಾರೆ ಎಂದು ದೆಹಲಿ ಪೊಲೀಸರು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

ಇದೇ ಪ್ರಕರಣದಲ್ಲಿ ಜೊತೆಗಿದ್ದ ಮತ್ತೊಬ್ಬ ಸಿಜೆಪಿ ಮುಖಂಡ ಅಜಿಂಕ್ಯ ಶಿಂಧೆ ಅವರನ್ನು 5,000 ರೂ.ಗಳ ವೈಯಕ್ತಿಕ ಬಾಂಡ್ ಹಾಗೂ ಮುಂದಿನ ಒಂದು ವರ್ಷದವರೆಗೆ ಸಾರ್ವಜನಿಕ ಶಾಂತಿಗೆ ಭಂಗ ತರುವಂತಹ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ ಎಂಬ ಷರತ್ತಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಮತ್ತೊಂದೆಡೆ, ಕೇಂದ್ರ ಸರ್ಕಾರದ ಈ ಕ್ರಮದ ವಿರುದ್ಧ ತೀವ್ರವಾಗಿ ಕಿಡಿಕಾರಿರುವ ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪಕೆ, "ಪ್ರತಿಭಟನೆಯ ಹಕ್ಕನ್ನು ಯಾರೂ ರದ್ದುಗೊಳಿಸಲು ಸಾಧ್ಯವಿಲ್ಲ" ಎಂದು ಹೇಳಿದ್ದು, ಪಕ್ಷದ ಮುಖಂಡರಿಗೆ ಕಾನೂನು ನೆರವು ನೀಡಲು ವಿಳಂಬ ಮಾಡಲಾಗಿದೆ ಎಂದು ಸಿಜೆಪಿಯ ಕಾನೂನು ವಿಭಾಗದ ಮುಖ್ಯಸ್ಥೆ ರತ್ನಾ ಸಿಂಗ್ ಆರೋಪಿಸಿದ್ದಾರೆ.

ಕಾಕ್ರೋಚ್ ಜನತಾ ಪಾರ್ಟಿಯ ಸಂಸ್ಥಾಪಕ ಅಭೀಜಿತ್ ದೀಪ್ಕೆ, ಪ್ರಧಾನಿ ನರೇಂದ್ರಮೋದಿ ಅವರ ಸರ್ಕಾರ ವಿರುದ್ಧ ಸಾಮಾಜಿಕ ಜಾಲತಾಣ 'ಘಿ' ನಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. "ಜಂತರ್ ಮಂತರ್‌ನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದ್ದೇ ಸೌರವ್ ಮತ್ತು ಆಶುತೋಷ್ ಮಾಡಿದ ಏಕೈಕ ತಪ್ಪೇ ಸರ್ಕಾರದ ವಿರೋಧಿ ಧ್ವನಿಯನ್ನು ಅಡಗಿಸಲು ಬಯಸಿದ್ದರೆ ಹಿಂಬಾಗಿಲ ತಂತ್ರಗಳನ್ನು ಬಳಸದೆ ಅಧಿಕೃತವಾಗಿ ದೇಶದಲ್ಲಿ 'ತುರ್ತು ಪರಿಸ್ಥಿತಿ' ಘೋಷಿಸುವ ಧೈರ್ಯ ತೋರಿಸಿ."ಅಭೀಜಿತ್ ದೀಪ್ಕೆ, ಸವಾಲು ಹಾಕಿದ್ದಾರೆ.

ಸಿಜೆಪಿ ಕಾನೂನು ವಿಭಾಗದ ಮುಖ್ಯಸ್ಥೆ ರತ್ನಾ ಸಿಂಗ್ ಮಾತನಾಡಿ, "ಪೊಲೀಸರು ನಿನ್ನೆ ಬೆಳಗಿನಜಾವ3ಗಂಟೆಗೆಖಾಸಗಿವಾಹನದಲ್ಲಿ ನಾಯಕರನ್ನು ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ಇಡೀ ದಿನ ವಕೀಲರೊಂದಿಗೆ ಭೇಟಿಯಾಗಲು ಅವಕಾಶ ನೀಡದೆ ಕಾನೂನುಬಾಹಿರವಾಗಿ ಬಂಧನದಲ್ಲಿಡಲಾಗಿತ್ತು. ದೌರ್ಜನ್ಯದ ಹೊರತಾಗಿಯೂ ನಮ್ಮ ನಾಯಕರ ಹೋರಾಟದ ಹುಮ್ಮಸ್ಸು ಕುಗ್ಗಿಲ್ಲ" ಎಂದು ತಿಳಿಸಿದ್ದಾರೆ. ಇದಲ್ಲದೆ, ರಾಷ್ಟ್ರರಾಜಧಾನಿಯ ರಾಜಕೀಯ ಕೇಂದ್ರಭಾಗವಾದ ಜಂತರ್ ಮಂತರ್‌ನಿಂದ ಪ್ರತಿಭಟನಾ ಸ್ಥಳವನ್ನು ದೂರಕ್ಕೆ ಸ್ಥಳಾಂತರಿಸುವುದು ಪ್ರಜಾಸತ್ತಾತ್ಮಕ ಹೋರಾಟದ ಧ್ವನಿಯನ್ನು ಹತೋಟಿ ಮಾಡುವ ಹುನ್ನಾರವಾಗಿದೆ ಎಂದು ಸಿಜೆಪಿ ಆರೋಪಿಸಿದೆ.

ಸಿಜೆಪಿ ನಾಯಕರಿಗೆ ಜೈಲು ರಾಹುಲ್ ಕಿಡಿ

ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ ಕಾಕ್‌ರೋಚ್ ಜನತಾ ಪಾರ್ಟಿ ನಾಯಕರಾದ ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರನ್ನು ಜೈಲಿಗೆ ಕಳುಹಿಸಿರುವುದನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತೀವ್ರವಾಗಿ ಖಂಡಿಸಿದ್ದಾರೆ.

ಯುವಕರನ್ನು ಜೈಲಿಗೆ ಕಳುಹಿಸುವುದು ಹೇಡಿತನದ ಕೃತ್ಯ ಎಂದು ಅವರು ಅವರು ಕಿಡಿಕಾರಿದ್ದಾರೆ.

ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಅಪರಾಧವಲ್ಲ,ಯುವಕರಜೈಲಿಗೆಕಳುಹಿಸಿದ್ದು ಹೇಡಿತನದ ಕೃತ್ಯ: ರಾಹುಲ್ ಗಾಂಧಿ:

ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ ಕಾಕ್‌ರೋಚ್ ಜನತಾ ಪಾರ್ಟಿ ನಾಯಕರಾದ ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರನ್ನು ಜೈಲಿಗೆ ಕಳುಹಿಸಿರುವುದನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಖಂಡಿಸಿದ್ದಾರೆ. ಯುವಕರನ್ನು ಜೈಲಿಗೆ ಕಳುಹಿಸುವುದು ಹೇಡಿತನದ ಕೃತ್ಯ ಎಂದು ಅವರು ಟೀಕಿಸಿದ್ದಾರೆ.

ಸಿಜೆಪಿ ಪ್ರತಿಭಟನೆ ಕುರಿತು ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ, ಜಂತರ್ ಮಂತರ್‌ನಲ್ಲಿ ತ್ರಿವರ್ಣ ಧ್ವಜ ಹಿಡಿದು ಶಾಂತಿಯುತವಾಗಿ ಪ್ರತಿಭಟನೆ ನಡೆಸುವುದು ಅಪರಾಧವಲ್ಲ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಚಾರಿತ್ರ್ಯಹರಣ ಸಂಚು ಹೆಚ್ಚು ಮಾಹಿತಿ ನನಗಿದೆ

ಬೆಂಗಳೂರು : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಾರಿತ್ರ್ಯಹರಣ ಮಾಡುವ ಸಂಚು ನಡೆದಿದ್ದು, ಇದರ ಬಗ್ಗೆ ತಮಗೆ ಹೆಚ್ಚಿನ ಮಾಹಿತಿ ಇದೆ ಎಂದು ಹೇಳಿದ್ದಾರೆ. ಗೃಹ ಸಚಿವ ಪ್ರಿಯಾಂಕ ಖರ್ಗೆ ಹೇಳಿದರು.



ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಡೆಯುತ್ತಿರುವ ಸ್ಟಿಂಗ್ ಆಪರೇಷನ್ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ.

"ಸಿದ್ದರಾಮಯ್ಯ ಸಾಹೇಬರು ಈಗಾಗಲೇ ಪ್ರತಿಕ್ರಿಯೆ ನೀಡಿದ್ದಾರೆ. ಅದಕ್ಕಾಗಿ ಬೇರೆ ಯಾರು ಮಾತಾಡುವ ಅವಶ್ಯಕತೆ ಇಲ್ಲ. ಏನೇ ಇದ್ದರೂ ಕೂಡ ಕಾನೂನಿನ ಪ್ರಕಾರ ತನಿಖೆ ಮಾಡಿ ಬಯಲಿಗೆ ತರುವುದಕ್ಕೆ ಅವರು ಹೇಳಿದ್ದಾರೆ. ಅದನ್ನು ನಾವು ಮಾಡ್ತೀವಿ" ಎಂದು ಪ್ರಿಯಾಂಕ್ ಖರ್ಗೆ ಹೇಳಿದರು

"ಯಾರು ಸ್ಟಿಂಗ್ ಸ್ಟಿಂಗ್ ಅಂತಾ ನಿತ್ಯ ಮಾತಾಡ್ತಿದ್ದಾರೆ. ನನ್ನ ಪ್ರಕಾರ ಇದರ ಬಗ್ಗೆ ಅವರಿಗೆ ಹೆಚ್ಚು ಮಾಹಿತಿ ಇದೆ. ಸಮಯ ಸಂದರ್ಭ ಬಂದಾಗ ಅದನ್ನು ತಿಳಿಸುತ್ತೇನೆ" ಎಂದು ಎಚ್ಚರಿಕೆ ನೀಡಿದ್ದಾರೆ.

ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು "ರೇವಣ್ಣ ಕುಟುಂಬದಂತೆ ಸಿದ್ದರಾಮಣ್ಣನನ್ನು ಮುಗಿಸುವ ಕೆಲಸ ನಡೆದಿದೆ" ಎಂದು ಹೇಳಿದ್ದಕ್ಕೆ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿ"ಕುಮಾರಸ್ವಾಮಿವರು ಕೇಂದ್ರದ ಸಚಿವರು, ಮುಖ್ಯಮಂತ್ರಿಗಳ ಬಗ್ಗೆ ಅವರು ಈ ರೀತಿ ಕ್ಷುಲ್ಲಕವಾಗಿ ಮಾಡೋದು ಸರಿಯಲ್ಲ" ಎಂದು ಅಸಮಾಧಾನ ವ್ಯಕ್ತಪಡಿಸಿದರು

"ರೇವಣ್ಣನವರಕುಟಂಬದಬಗ್ಗೆನಾವುಮಾತಾಡ್ದೀವಾ ಮುಖ್ಯಮಂತ್ರಿಗಳು ಅವರು ಮಾಡಿದ್ದಾ ಹೇಳಿ ಸುಮ್ಮನೆ ಅಪಪ್ರಚಾರ ಮಾಡೋದು ಸರಿಯಲ್ಲ. ವೀಡಿಯೋಗಳನ್ನು ಕಾಂಗ್ರೆಸ್ನವರು ಮಾಡಿದ್ದೀವಾ ಎಂದು ಪ್ರಶ್ನಿಸಿದರು. ರೇವಣ್ಣ ಮಗ ಜೈಲಿನಲ್ಲಿರಲು ಕಾಂಗ್ರೆಸ್ ಕಾರಣನಾ"ರೇವಣ್ಣನವರ ಮಗ ಜೈಲಿನಲ್ಲಿ ಇರೋದಕ್ಕೆ ಕಾಂಗ್ರೆಸ್ ಕಾರಣನಾ ಅವರ ವಿಕೃತ ಮನಸ್ಸಿಗೆ ಕಾಂಗ್ರೆಸ್ ಕಾರಣನಾ ನಿಮ್ಮ ಮನೆ ಮಕ್ಕಳನ್ನು ಸರಿಯಾಗಿ ಬೆಳೆಸಿಲ್ಲ ಅಂದರೆ ಅದಕ್ಕೆ ಕಾಂಗ್ರೆಸ್ಗೆ ಏನ್ರೀ ಸಂಬಂಧ?" ಎಂದು ವಾಗ್ದಾಳಿ ನಡೆಸಿ"ನಾಚಿಕೆ ಆಗಲ್ವಾ ಈ ಮಾತಾಡೋಕೆ? ಸ್ಟಿಂಗ್ ಮಾಡಿಸಿದ್ದು ಏನು ಡಿ.ಕೆ. ಶಿವಕುಮಾರ್? ಅಥವಾ ಸಿದ್ದರಾಮಯ್ಯ ನವರು ಮಾಡಿಸಿರೋದಾ? ನಿಮ್ಮ ಮನೆಯ ಮಕ್ಕಳು ಮಾಡಿರೋ ಕೆಲಸ. ಅದ-ಕ್ಕೆ ಕಾಂಗ್ರೆಸ್ಗೆ ಏನ್ರೀ ಸಂಬಂಧ?" ಎಂದು ಆಕ್ರೋಶ ಹೊರ ಹಾಕಿದರು.

"ಸ್ವಲ್ಪ ನಾಲಿಗೆ ಬಿಗಿಹಿಡಿದು ಮಾತಾಡೋದನ್ನು ಕಲಿಯಿರಿ. ಕಾಂಗ್ರೆಸ್ ಯಾವ ಕುಟುಂಬಗಳ ಮೇಲೂ ವೈಯಕ್ತಿಕ ದ್ವೇಷ ತೋರಿಸಿಲ್ಲ, ತೋರಿಸೋದಿಲ್ಲ. ನಮ್ಮ ರಾಜಕೀಯ ಅಂತಹದ್ದಲ್ಲ" ಎಂದರು

ಸಿಬಿಐ ತನಿಖೆ ಏಕೆ ಬೇಕು

"ಸಿಬಿಐ ತನಿಖೆ ಏನತಕ್ಕೆ ಬೇಕು? ಸಿಬಿಐಗೆ ಸಿಬ್ಬಂದಿಗಳನ್ನು ಎಲ್ಲಿಂದ ತರುತ್ತಾರೆ? ಅದಕ್ಕೆ ನಾವೇ ತಾನೇ ಸಿಬ್ಬಂದಿಗಳನ್ನು ಕೊಡಬೇಕು. ಹಿಂದಿನ ಎರಡು ಕೇಸ್‌ಗಳನ್ನೇ ಅವ್ರು ಇನ್ನೂ ಮುಗಿಸಿಲ್ಲ. ಅವ್ರೇ ಪತ್ರ ಬರೆಯುತ್ತಿದ್ದಾರೆ ಸಿಬ್ಬಂದಿಗಳನ್ನು ಕೊಡಿ, ನಾವು ಕೇಸ್‌ಗಳನ್ನುಮುಗಿಸಬೇಕೆಂದು" ಎಂದು ಹೇಳಿದ್ದಾರೆ.

"ರಾಜ್ಯದ ಪೊಲೀಸರೇ ಇದರ ತನಿಖೆಯನ್ನು ಮಾಡುತ್ತಾರೆ" ಎಂದು ಸ್ಪಷ್ಟಪಡಿಸಿದ್ದಾರೆ.

"ಕುಮಾರಸ್ವಾಮಿಯವರೇ, ತಮ್ಮ ಕುರ್ಚಿಗೆ ತಾವೇ ಅಗೌರವ ತರಿಸಿಕೊಳ್ಳುತ್ತಿದ್ದೀರಾ? ನಮ್ಮ ಕುಟುಂಬದ ಸಾಧನೆ ಅಂತಾ ಹೇಳಿಕೊಳ್ಳುತ್ತೀರಾ? ಈಗ ನೀವೇ ನಿಮ್ಮ ಕುಟುಂಬಕ್ಕೆ ಕೆಟ್ಟ ಹೆಸರು ತರುತ್ತಿದ್ದೀರಾ" ಎಂದು ತಿರುಗೇಟು ನೀಡಿದರು.

ಧಾರವಾಡ| ಬರ: ರೂ. 50 ಸಾವಿರ ಪರಿಹಾರಕ್ಕೆ ಆಗ್ರಹ

ಧಾರವಾಡ : ರಾಜ್ಯ ಸರ್ಕಾರ ಬರ ಪರಿಹಾರವಾಗಿ ಪ್ರತಿ ರೈತಗೆ ರೂ. 50 ಸಾವಿರ ಪರಿಹಾರ ನೀಡಬೇಕು, ಹಿಂಗಾರು ಹಂಗಾಮಿಗೆ ಉಚಿತವಾಗಿ ಬಿತ್ತನೆ ಬೀಜ, ಗೊಬ್ಬರ ಒದಗಿಸಬೇಕು ಎಂದು ರತ್ನ ಭಾರತ ರೈತ ಸಮಾಜದವರು ಸೋಮವಾರ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಮುಂದೆ ಸಮಾವೇಶಗೊಂಡ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಾರುಕೋಲು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು. 'ನ್ಯಾಯ ಬೇಕು' ಘೋಷಣೆ ಕೂಗಿದರು. ಜಿಲ್ಲಾಧಿಕಾರಿ ಕಚೇರಿಗೆ ಮನವಿ ಪತ್ರ



ಸಲ್ಲಿಸಿದರು. 'ಮುಂಗಾರು ಹಂಗಾಮಿನಲ್ಲಿ ಮಳೆ ತೀವ್ರ ಕೊರತೆಯಾಗಿದೆ. ಬೆಳೆಗಳು ಒಣಗಿ ಬಹಳಷ್ಟು ನಷ್ಟವಾಗಿದೆ. ಬಿತ್ತನೆ ಬೀಜ, ಗೊಬ್ಬರು, ಬೇಸಾಯಕ್ಕೆ ಮಾಡಿದ ಖರ್ಚೂ ಕೈಗೆ ಸಿಕ್ಕಿಲ್ಲ. ಬೆಳೆ ಹಾನಿಯಾಗಿ ರೈತರು ಸಂಕಷ್ಟದಲ್ಲಿದ್ದಾರೆ' ಎಂದರು. ರಾಜ್ಯ ಸರ್ಕಾರವು ಪ್ರತಿ ರೈತಗೆ ರೂ. 2500 ನೆರವು ಘೋಷಿಸಿದೆ. ಈ ಅಲ್ಪಮೊತ್ತಕ್ಕೆ ರೂ.500 ಸೇರಿಸಿ ರಾಜ್ಯ ಸರ್ಕಾರಕ್ಕೆ ರೈತರೇ ರೂ. 3000 ವಾಪಸ್ ನೀಡಲು ನಿರ್ಧರಿಸಿದ್ದೇವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಧಾರವಾಡ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಸರ್ಕಾರ ಘೋಷಿಸಿದೆ. ರೈತರಿಗೆ ಈವರೆಗೆ ಪರಿಹಾರ ನೀಡಿಲ್ಲ. ತಕ್ಷಣವೇ ಪ್ರತಿ ರೈತಗೆ ರೂ. 50 ಸಾವಿರ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ಮರಗಾಲ ಮೇಲೆಯೇ ರೈತನಿಂದ ದೇವಸ್ಥಾನಕ್ಕೆ ಪಾದಯಾತ್ರೆ



ನವಲಗುಂದ : ಅನ್ನದಾತ ರೈತರ ಏಳಿಗೆ ಹಾಗೂ ಸಮೃದ್ಧ ಬೆಳೆಗಾಗಿ ಪಟ್ಟಣದ ಸಿದ್ದಾಪುರ ಓಣಿಯ ಯುವಕ ಪೀರಪ್ಪ ಉರ್ಫ ಮುದಕಪ್ಪ ತಂದೆ ಸುರೇಶ ಮರಲಕ್ಕನ್ನವರ ಎಂಬ ಯುವ ರೈತ ಅಪರೂಪದ ಹರಕೆಯೊಂದನ್ನು ಹೊತ್ತು ಮರಗಾಲ ಕಟ್ಟಿಕೊಂಡು ಪಾದಯಾತ್ರೆ ಪ್ರಾರಂಭಿಸಿದ್ದಾನೆ.

ಪಟ್ಟಣದ ನೀಲಮ್ಮನ ಜಲಾಶಯ ಬಳಿ ಯಿರುವ ಶಿಬಾರಗಟ್ಟಿಯಿಂದ ಶನಿವಾರ ಪಾದಯಾತ್ರೆ ಪ್ರಾರಂಭಿಸಿರುವ ಯುವ ರೈತ ಬಾಗಲಕೋಟಿ ಜಿಲ್ಲೆಯ ಬಾದಾಮಿ ತಾಲೂಕಿನ ನರನೂರ ಗ್ರಾಮದ ಶ್ರೀ ಬರಮಲಿಂಗೇಶ್ವರ ದೇವಸ್ಥಾನ ತಲುಪಿ, ದೇವರಿಗೆ ವಿಶೇಷ ಪೂಜೆ ಹಾಗೂ ದರ್ಶನ ಪಡೆಯುವುದರ ಮೂಲಕ ಸಂಪನ್ನಗೊಳಿಸಲಿದ್ದಾನೆ.

ಸುಮಾರು 75 ಕಿಮಿ ಪಾದಯಾತ್ರೆ ಇದಾಗಿದ್ದು ಭಾನುವಾರ ದೇವಸ್ಥಾನ ತಲುಪಲಿದ್ದಾನೆ.

ಶಂಕರಪ್ಪತೋಟದ,ಮಂಜುನಾಥಗಡ್ಡಿ,ಮಹಾಂತೇಶ ಮರಲಕ್ಕನವರ, ಉಳಿವೆಪ್ಪ ಇಬ್ರಾಹಿಂಪುರ, ಬರಮಪ್ಪ ಮರಲಕ್ಕನವರ, ಗುರಪ್ಪ ಗಡ್ಡಿ, ಕಾಶಪ್ಪ ಮೆಟಗುಡ್ಡ, ಬಸವರಾಜ ದಾಸರ, ಪಕ್ಕೀರಪ್ಪ ಗಡ್ಡಿ, ಬಸವರಾಜ ಮರಲಕ್ಕನವರ, ಸಿದ್ದಪ್ಪ ತೋಟದ, ಯಲ್ಲಪ್ಪ ಈಟಿ, ಭರತ ಪಾಟೀಲ, ಹನುಮಂತಪ್ಪ ನರಗುಂದ, ಶರಣಪ್ಪ ಕರಿ, ನಾಗಲಿಂಗಪ್ಪ ಮರಲಕ್ಕನವರ ಆನಂದ ಹಾಲಣ್ಣವರ, ದಾಸಪ್ಪ ಐ ಡಿ ಇತರರು ಆತನನ್ನು ಸನ್ಮಾನಿಸಿ ಶುಭಹಾರೈಸಿದ್ದಾರೆ.

ತಾಂತ್ರಿಕ ಲೋಪಗಳ ಆರೋಪ: ಸಂಸ್ಕೃತಿ ಭವನ ಕಾಮಗಾರಿ ರದ್ದತಿಗೆ ಆಗ್ರಹಿಸಿ ಸ್ಥಳೀಯರಿಂದ ಅಹೋರಾತ್ರಿ ಧರಣಿ, ಉಪವಾಸ ಸತ್ಯಾಗ್ರಹ!

ಕಟ್ಟಡದ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆ-ಸಾರ್ವಜನಿಕ ಶೌಚಾಲಯ ಮುಚ್ಚಿಟ್ಟ ಆರೋಪ; ಅಧಿಕಾರಿಗಳ ವಿರುದ್ಧ ಸ್ಥಳೀಯರ ಆಕ್ರೋಶ

ಹುಬ್ಬಳ್ಳಿ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ (HDMC) ವತಿಯಿಂದ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಸಂಸ್ಕೃತಿ ಭವನ ನಿರ್ಮಾಣ ಕಾಮಗಾರಿಯ ಅಂದಾಜು ಪತ್ರಿಕೆ ಹಾಗೂ ಕಟ್ಟಡದ ವಿನ್ಯಾಸದ ಕುರಿತು ಸ್ಥಳೀಯರು ಗಂಭೀರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಟ್ಟಡದ ವಿನ್ಯಾಸದಲ್ಲಿ ಅಗತ್ಯ ತಾಂತ್ರಿಕ ಅಂಶಗಳನ್ನು ಕಡೆಗಣಿಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಕಾಮಗಾರಿಯ ಟೆಂಡರ್ ರದ್ದುಪಡಿಸಿ, ತಜ್ಞರಿಂದ ಮರುಪರಿಶೀಲನೆ ನಡೆಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.



ಅಂದಾಜು ಪತ್ರಿಕೆಯಲ್ಲಿ ತಾಂತ್ರಿಕ ಲೋಪಗಳ ಆರೋಪ

ಕಾಮಗಾರಿಯ ಅಂದಾಜು ಪತ್ರಿಕೆಯಲ್ಲಿ ಸ್ಟೀಲ್ ಪ್ರಮಾಣದ ವಿವರಗಳು, ಫುಟಿಂಗ್ ವಿನ್ಯಾಸ ಹಾಗೂ ಸ್ಲ್ಯಾಬ್ಗೆ ಸಂಬಂಧಿಸಿದ ಬೀಮ್ ವಿನ್ಯಾಸದ ಕುರಿತು ಸ್ಪಷ್ಟತೆ ಇಲ್ಲವೆಂದು ಸ್ಥಳೀಯರು ಆರೋಪಿಸಿದ್ದಾರೆ. ಅಲ್ಲದೆ, ನೆಲಹಂತದಿಂದ ಸ್ಲ್ಯಾಬ್‌ವರೆಗಿನ ಎತ್ತರವನ್ನು ಕೇವಲ ಆರು ಅಡಿ ಎಂದು ಯೋಜಿಸಲಾಗಿದೆ ಎಂಬ ಆಕ್ಷೇಪವೂ ವ್ಯಕ್ತವಾಗಿದೆ. ಈ ಅಂಶಗಳ ಕುರಿತು ಸಂಬಂಧಪಟ್ಟ ಇಂಜಿನಿಯರ್‌ಗಳು ಹಾಗೂ ತಾಂತ್ರಿಕ ತಜ್ಞರಿಂದ ಪರಿಶೀಲನೆ ನಡೆಸಿ, ಕಟ್ಟಡದಸುರಕ್ಷತೆಯನ್ನುಖಚಿತಪಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಟ್ಟಡದ ವಿನ್ಯಾಸ ಮತ್ತು ಅಂದಾಜು ಪತ್ರಿಕೆ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿವೆಯೇಎಂಬುದನ್ನುಸ್ವತಂತ್ರ ತಾಂತ್ರಿಕ ಸಮಿತಿಯಿಂದ ಪರಿಶೀಲಿಸಬೇಕು. ಪರಿಶೀಲನೆ ಪೂರ್ಣಗೊಳ್ಳುವವರೆಗೆ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂಬುದು ಸ್ಥಳೀಯರ ಪ್ರಮುಖ ಬೇಡಿಕೆಯಾಗಿದೆ.

ಖಾಲಿ ಜಾಗವೆಂದು ತಪ್ಪು ಮಾಹಿತಿ ನೀಡಿದ ಆರೋಪ

ಸಂಸ್ಕೃತಿ ಭವನ ನಿರ್ಮಾಣಕ್ಕೆ ಅನುದಾನ ಪಡೆಯುವ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳವು ಖಾಲಿ ಜಾಗವಾಗಿದೆ ಎಂದು ತಪ್ಪು ಮಾಹಿತಿ ಸಲ್ಲಿಸಲಾಗಿದೆ ಎಂಬ ಗಂಭೀರ ಆರೋಪವನ್ನು ಸ್ಥಳೀಯರು ಮಾಡಿದ್ದಾರೆ. ವಾಸ್ತವದಲ್ಲಿ ಆ ಸ್ಥಳದಲ್ಲಿ ಸಾರ್ವಜನಿಕ ಶೌಚಾಲಯ ಅಸ್ತಿತ್ವದಲ್ಲಿದ್ದರೂ, ಅದರ ಮಾಹಿತಿಯನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿಲ್ಲ ಎಂದು ಅವರು ದೂರಿದ್ದಾರೆ. ಸ್ಥಳೀಯರೊಂದಿಗೆ ಸಮಾಲೋಚನೆ ನಡೆಸದೆ ಈಗಾಗಲೇ ಸಾರ್ವಜನಿಕರು ಬಳಸುತ್ತಿದ್ದ ಶೌಚಾಲಯವನ್ನು ತೆರವುಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.ಸಾರ್ವಜನಿಕರಮೂಲಭೂತ ಸೌಕರ್ಯವನ್ನು ಕಡೆಗಣಿಸಿ ಕಾಮಗಾರಿ ಕೈಗೆತ್ತಿಕೊಳ್ಳುವುದು ಸರಿಯಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಮಗಾರಿರದ್ದತಿಗೆಅಹೋರಾತ್ರಿಹೋರಾಟ

ಕಟ್ಟಡದ ಸುರಕ್ಷತೆ, ಅಂದಾಜು ಪತ್ರಿಕೆಯಲ್ಲಿನ ಲೋಪಗಳ ಆರೋಪ, ಸಾರ್ವಜನಿಕ ಶೌಚಾಲಯದ ಅಸ್ತಿತ್ವ ಹಾಗೂ ಸ್ಥಳೀಯರ ಅಭಿಪ್ರಾಯವನ್ನು ನಿರ್ಲಕ್ಷಿಸಿರುವುದನ್ನು ವಿರೋಧಿಸಿ, ಸಂಸ್ಕೃತಿ ಭವನ ಕಾಮಗಾರಿಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ಸ್ಥಳೀಯರು ಅಹೋರಾತ್ರಿ ಧರಣಿ ಮತ್ತು ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು, ಅಂದಾಜು ಪತ್ರಿಕೆ ಹಾಗೂ ಕಟ್ಟಡದ ವಿನ್ಯಾಸವನ್ನು ಸಾರ್ವಜನಿಕರ ಮುಂದಿಡಬೇಕು, ಅನುದಾನ ಮಂಜೂರಾತಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಬೇಕು ಮತ್ತು ಸಾರ್ವಜನಿಕ ಶೌಚಾಲಯದ ವಿಚಾರದಲ್ಲಿ ಸ್ಪಷ್ಟನೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ಜನರ ಜೀವ ಮತ್ತು ಸಾರ್ವಜನಿಕ ಹಿತಾಸಕ್ತಿಯೇ ಮುಖ್ಯ

"ಕಟ್ಟಡ ನಿರ್ಮಾಣದಲ್ಲಿ ಯಾವುದೇ ತಾಂತ್ರಿಕ ಲೋಪಗಳಿದ್ದರೆ ಅವುಗಳನ್ನು ನಿರ್ಲಕ್ಷಿಸುವುದು ಸಾರ್ವಜನಿಕರ ಸುರಕ್ಷತೆಗೆ ಅಪಾಯಕಾರಿಯಾಗಬಹುದು. ಆದ್ದರಿಂದ ಕಾಮಗಾರಿ ಆರಂಭಿಸುವ ಮೊದಲು ತಜ್ಞರಿಂದ ಸಂಪೂರ್ಣ ಪರಿಶೀಲನೆ ನಡೆಸಬೇಕು. ಸಾರ್ವಜನಿಕ ಶೌಚಾಲಯದಂತಹ ಮೂಲಭೂತ ಸೌಕರ್ಯವನ್ನು ಸ್ಥಳೀಯರ ಅಭಿಪ್ರಾಯ ಪಡೆಯದೆ ತೆರವುಗೊಳಿಸಬಾರದು. ನಮ್ಮ ಬೇಡಿಕೆಗಳಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಸುತ್ತೇವೆ" ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಈ ಹಿನ್ನೆಲೆಯಲ್ಲಿ HDMC ಆಯುಕ್ತರು ಹಾಗೂ ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ, ಕಾಮಗಾರಿಯ ತಾಂತ್ರಿಕ ದಾಖಲೆಗಳು ಮತ್ತು ಅನುದಾನ ಮಂಜೂರಾತಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಶೀಲಿಸಿ, ಸ್ಥಳೀಯರ ಆತಂಕಗಳಿಗೆ ಸ್ಪಷ್ಟನೆ ನೀಡಬೇಕೆಂಬ ಒತ್ತಾಯ ಹೆಚ್ಚಾಗಿದೆ.

ಉ.ಕ.ದಲ್ಲಿ ಎ.ಐ. ಸಿ.ಬಿ.ಸಿ.ಟಿ ಸ್ಕ್ಯಾನಿಂಗ್

ಹುಬ್ಬಳ್ಳಿ : ಉತ್ತರ ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆಅತ್ಯಾಧುನಿಕಫೇಸ್3ಡಿಎಐಸಿಬಿಸಿಟಿ(CBCT) ಸ್ಕಾ ?ಯನಿಂಗ್ ಮಶಿನ್ ನ್ನು ಪರಿಚಯಿಸಲಾಗುತ್ತಿದೆ ಎಂದು ಡಾ. ಚಂದ್ರಶೇಖರ ಯಾವಗಲ್ ತಿಳಿಸಿದರು. ನಗರದ ವಿದ್ಯಾನಗರದ ಬಳಿಯ ಡಾ. ಯಾವಗಲ್ ಲೇಸರ್ ವೇದಾ ಕ್ಲಿನಿಕ್‌ನ ಸಭಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ನೂತನ ತಪಾಸಣಾ ಯಂತ್ರವನ್ನು

ಬ್ರೆಜಿಲ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಅದರ ಎಐ ಆಧಾರಿತ ತಪಾಸಣಾ ತಂತ್ರಜ್ಞಾನವು ಬಾಯಿ ಕ್ಯಾನ್ಸರ್, ಸೈನಸ್ ಸಮಸ್ಯೆಗಳು, ತಲೆ ಮತ್ತು ಕುತ್ತಿಗೆಗೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ದಂತ ತಪಾಸಣೆಗೆ ಸಹಕಾರಿಯಾಗಲಿದೆ. ಈ ವ್ಯವಸ್ಥೆಯ ಮೂಲಕ ರೋಗಿಗೆ ತಪಾಸಣೆ ನಡೆಸಿದ ಕೇವಲ 30 ಸೆಕೆಂಡುಗಳಲ್ಲಿ ಸ್ಪಷ್ಟವಾದ ಎಐ ವರದಿ ಲಭ್ಯವಾಗಲಿದ್ದು, ನಂತರ ರೇಡಿಯಾಲಜಿಸ್ಟ್‌ಗಳು ಆ ವರದಿಯನ್ನು ಪರಿಶೀಲಿಸಿ ಸುಮಾರು ಅರ್ಧ ಗಂಟೆಯೊಳಗೆ ಅಂತಿಮ ಅನುಮೋದಿತ ವರದಿ ನೀಡಲಿದ್ದಾರೆ ಎಂದು ತಿಳಿಸಿದರು.

ಈ ಹಿಂದೆ ಇಂತಹ ತಪಾಸಣೆಯ ವರದಿ ಪಡೆಯಲು ವಾರಗಟ್ಟಲೆ ಕಾಯಬೇಕಾಗುತ್ತಿತ್ತು. ಆದರೆ, ಹೊಸ ತಂತ್ರಜ್ಞಾನದ ಮೂಲಕ ಒಂದೇ ದಿನದಲ್ಲಿ ರೋಗಿಗಳಿಗೆ ವರದಿ ನೀಡಲು ಸಾಧ್ಯವಾಗಲಿದೆ. ಎಐ ಮೂಲಕ ಸಿದ್ಧವಾಗುವ ವರದಿಯನ್ನು ತಜ್ಞರು ಪರಿಶೀಲಿಸಿ ದೃಢೀಕರಿಸಲಿದ್ದಾರೆ. ಈ ತಂತ್ರಜ್ಞಾನವು ಶೇ. 99.99ರಷ್ಟು ಸ್ಪಷ್ಟತೆಯ ವರದಿ ನೀಡುತ್ತದೆ ಎಂದು ಅವರು ಹೇಳಿದರು.



ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡ ತಪಾಸಣಾ ಯಂತ್ರವನ್ನು ಈಗಾಗಲೇ ಅಮೆರಿಕದಲ್ಲಿ ಬಳಸಲಾಗುತ್ತಿದ್ದು, ಉತ್ತರ ಕರ್ನಾಟಕದ ಜನರಿಗೆ ಇಂತಹ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ತಮ್ಮ ಕ್ಲಿನಿಕ್‌ನಲ್ಲಿ ಅಳವಡಿಸಲಾಗುತ್ತಿದೆ. ಹೊಸ ವ್ಯವಸ್ಥೆಯ ತಪಾಸಣಾ ಶುಲ್ಕ ರೂ.850 ಇರಲಿದೆ. ಈ ಹಿಂದೆ ತಪಾಸಣೆಗೆ ರೂ.550 ಶುಲ್ಕವಿತ್ತು ಎಂದು ಮಾಹಿತಿ ನೀಡಿದರು.

ಫೇಸ್ 3ಡಿ ಎಐ ಸಿಬಿಸಿಟಿ ಸ್ಕಾ ?ಯನಿಂಗ್ ಯಂತ್ರವು ಪ್ರಮುಖವಾಗಿ ಬಾಯಿ ಕ್ಯಾನ್ಸರ್, ಏರ್‌ವೇಸ್ (ಉಸಿರಾಟದ ಮಾರ್ಗ), ಟಿಎಂಜೆ (ದವಡೆಯ ಸಂಧಿ), ಒಪಿಜಿ ಹಾಗೂ ಕೋನ್ ಬೀಮ್ ಕಂಪ್ಯೂಟೆಡ್ ಟೊಮೊಗ್ರಫಿ (ಅಃಅಖ) ಸ್ಕಾ ?ಯನಿಂಗ್ ಸೇರಿದಂತೆ ವಿವಿಧ ತಪಾಸಣೆಗಳಿಗೆ ನೆರವಾಗಲಿದೆ. ಈ ಯಂತ್ರವನ್ನು ಪ್ರಸಿದ್ಧ ವೆಲ್‌ಮೆನ್ ಸಂಸ್ಥೆಯ ಮೂಲಕ ಅಳವಡಿಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ಲಕ್ಷ್ಮೀ ಹಾಗೂ ಡಾ. ರಾಕೇಶ್ ಯಾವಗಲ್ ಉಪಸ್ಥಿತರಿದ್ದರು.

PUBLIC FAST KANNADA DAILY NEWS PAPER

ದಿನಾಂಕ : 15-10-2026

ಬಿ.ಎಲ್.ಡಿ.ಇ ಡೀಮ್ಡ್ ವಿವಿ ಮಹಿಳಾ ಬ್ಯಾಡ್ಮಿಂಟನ್ ತಂಡಕ್ಕೆ ಪ್ರಥಮ ಸ್ಥಾನ



ವಿಜಯಪುರ: ಮಹಾರಾಷ್ಟ್ರದ ಲೋಣಿಯ ಪ್ರವರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (PIMS) ವತಿಯಿಂದ ಅ.3ರಿಂದ 6ರವರೆಗೆ ಆಯೋಜಿಸಿದ್ದ 'ಇಗ್ನಿಷಿಯಾ-2026' ಅಂತರ ವೈದ್ಯಕೀಯ ಮಹಾವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಬಿ.ಎಲ್.ಡಿ.ಇ (ಡೀಮ್ಡ್ ವಿಶ್ವವಿದ್ಯಾಲಯ)ದ ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ 27 ವಿದ್ಯಾರ್ಥಿಗಳ ತಂಡ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದೆ.

ಕ್ರೀಡಾಕೂಟದ ಮಹಿಳಾ ಬ್ಯಾಡ್ಮಿಂಟನ್ ಡಬಲ್ಸ್ ವಿಭಾಗದಲ್ಲಿ ವಿಶ್ವವಿದ್ಯಾಲಯದ ತನುಶ್ರೀ ಪಾಟೀಲ ಹಾಗೂ ಸುಭಗಾ ಪಿ.ಎನ್. ಅವರು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಈ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಇದಲ್ಲದೆ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್ ಹಾಗೂ ಬ್ಯಾಡ್ಮಿಂಟನ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಕ್ರೀಡಾ ಪ್ರತಿಭೆ ಪ್ರದರ್ಶಿಸಿದರು.

ಸಾಧಕ ಕ್ರೀಡಾಪಟುಗಳು ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳನ್ನು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ, ಕುಲಪತಿ ಡಾ. ಅರುಣ ಇನಾಮದಾರ, ಕುಲಸಚಿವ ಡಾ. ಆರ್.ವಿ. ಕುಲಕರ್ಣಿ, ಪ್ರಾಚಾರ್ಯೆ ಹಾಗೂ ಡೀನ್ ಡಾ. ತೇಜಸ್ವಿನಿ ವಲ್ಲಭ, ವಿದ್ಯಾರ್ಥಿ ಕಲ್ಯಾಣ ಮತ್ತು ಕ್ರೀಡಾ ವಿಭಾಗದ ಡೀನ್ ಡಾ. ಗಿರೀಶ ಕುಲ್ಲೊಳ್ಳಿ ಹಾಗೂ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕಿಡಾ.ಮಹಾದೇವಿವಾಲಿಅಭಿನಂದಿಸಿದ್ದಾರೆ.

ಮನೆಗೆ ನುಗ್ಗಿ 120 ಗ್ರಾಂ ಚಿನ್ನ ಕಳವು : ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಮನೆಯವರು

ದೇವನಹಳ್ಳಿ : ದೇವನಹಳ್ಳಿ ತಾಲೂಕು ವಿಜಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗೊಬ್ಬರಗುಂಟೆ ಗ್ರಾಮದಲ್ಲಿ ಮನೆಗೆ ನುಗ್ಗಿ 120 ಗ್ರಾಂ ಚಿನ್ನ ಕಳವು ಮಾಡಿದ್ದ ಆರೋಪಿಯನ್ನು ಮನೆಯವರೇ ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ನಡೆದಿದೆ.

ಗೊಬ್ಬರಗುಂಟೆ ಗ್ರಾಮದ ಕೃಷ್ಣಪ್ಪ ಎಂಬುವವರ ಮನೆಗೆ ನುಗ್ಗಿದ ಆರೋಪಿ 120 ಗ್ರಾಂ ಚಿನ್ನ ಕಳವು ಮಾಡಿದ್ದಾನೆ. ಮನೆಯವರೆಲ್ಲರೂ ವಿಜಯಪುರದಲ್ಲಿ ಸಿನಿಮಾ ವೀಕ್ಷಿಸಲು ತೆರಳಿದ್ದಾಗ, ಅವರ ಚಲನವಲನಗಳ ಮೇಲೆ ದೂರದಿಂದಲೇ ನಿಗಾ ಇಟ್ಟಿದ್ದ ಆರೋಪಿ, ಮಧ್ಯಾಹ್ನ 1.50ರ ಸುಮಾರಿಗೆ ಮನೆಗೆ ನುಗ್ಗಿ ಕಳ್ಳತನ ಮಾಡಿದ್ದಾನೆ ಎನ್ನಲಾಗಿದೆ.

ಕೃಷ್ಣಪ್ಪ ಅವರು ಮನೆಗೆ ಮರಳಿದಾಗ ಬಾಗಿಲು ಒಳಗಿನಿಂದ ಲಾಕ್ ಆಗಿರುವುದನ್ನು ಗಮನಿಸಿದ್ದಾರೆ. ಮನೆಯವರೆಲ್ಲರೂ ಸಿನಿಮಾ ನೋಡಲು ತೆರಳಿದ್ದ ಸಂದರ್ಭದಲ್ಲಿ ಒಳಗಿನಿಂದ ಬಾಗಿಲು ಲಾಕ್ ಮಾಡಿದ್ದು ಯಾರು ಎಂಬ ಅನುಮಾನ ಮೂಡಿದ್ದರಿಂದ, ತಕ್ಷಣ ತಮ್ಮ ಮಗನಿಗೆ ಫೋನ್ ಮಾಡಿದ್ದಾರೆ. ಆಗ ಸಿನಿಮಾ ವೀಕ್ಷಿಸುತ್ತಿದ್ದ ಮಗ, ಮೊಬೈಲ್‌ನಲ್ಲಿ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ವ್ಯಕ್ತಿಯೊಬ್ಬ ಮನೆಗೆ ನುಗ್ಗಿರುವುದು ತಿಳಿದುಬಂದಿದೆ.



ತಕ್ಷಣ ಮನೆಗೆ ಬಂದ ಮಗ, ಬಾಗಿಲು ಒಡೆದು ಒಳಪ್ರವೇಶಿಸಿ ಹುಡುಕಾಟ ನಡೆಸಿದ್ದಾನೆ. ಈ ವೇಳೆ ಒಂದು ಕೊಠಡಿಯಲ್ಲಿ ಮಂಚದ ಕೆಳಗೆ ಅವಿತುಕೊಂಡಿದ್ದ ಆರೋಪಿಯನ್ನು ಹಿಡಿದಿದ್ದಾರೆ.

ಕಳವು ಮಾಡಿದ್ದ 120 ಗ್ರಾಂ ಚಿನ್ನ ಆತನ ಜೇಬಿನಲ್ಲಿ ಪತ್ತೆಯಾಗಿದ್ದು, ಚಿನ್ನದ ಸಮೇತ ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಂಧಿತನನ್ನು ಕೇರಳದ ತ್ರಿಶೂರ್ ಜಿಲ್ಲೆಯ ಚಿತ್ತಿಲಪಲ್ಲಿ ಮೂಲದ ಅಜಯ್ ಎಂದು ಗುರುತಿಸಲಾಗಿದೆ. ಆತ ಯಲಹಂಕದ ಸಮೀಪದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಸ್ನೇಹಿತರೊಂದಿಗೆ ವಾಸವಾಗಿದ್ದು, ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ಕಳ್ಳತನಕ್ಕೂ ಮುನ್ನ ಎರಡು-ಮೂರು ದಿನಗಳಿಂದ ಮನೆಯವರ ಚಲನವಲನಗಳನ್ನು ಗಮನಿಸಿ, ಸೂಕ್ತ ಸಮಯಕ್ಕಾಗಿಕಾಯ್ದುಕೃತ್ಯಎಸಗಿರುವುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ತಿಳಿದು ಬಂದಿದೆ.

ಈ ಸಂಬಂಧ ವಿಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ದಿನಗೂಲಿ ನೌಕರರಿಗೆ ಸೌಲಭ್ಯ ಕಲ್ಪಿಸಲು ಆಗ್ರಹ

ವಿಜಯಪುರ: ಹೈಕೋರ್ಟ್ ಆದೇಶದಂತೆ 1996ಕ್ಕಿಂತ ಮೊದಲು ನೇಮಕಗೊಂಡ ದಿನಗೂಲಿ ಕ್ಷೇಮಾಭಿವೃದ್ಧಿ ನೌಕರರಿಗೆ ಡಿ.ಎ., ಎಚ್.ಆರ್.ಎ., ಎಕ್ಸ್‌ಗ್ರೇಷಿಯಾ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ತಕ್ಷಣ ಕಲ್ಪಿಸಬೇಕು. ಅಲ್ಲದೆ, ಸಮಾನ ಕೆಲಸಕ್ಕೆ ಸಮಾನ ವೇತನ, ಸೇವಾ ಭದ್ರತೆ ಹಾಗೂ ಸಾಮಾಜಿಕ ಭದ್ರತೆ ಒದಗಿಸಬೇಕು ಎಂದು ಸಂಜಯ ಜೋಶಿ ಆಗ್ರಹಿಸಿದರು.

ನಗರದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಗೂಲಿ ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಳಂಬ ಮಾಡಬಾರದು. ಇಲ್ಲವಾದರೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವ ಅನಿವಾರ್ಯತೆ ಎದುರಾಗಲಿದೆ ಎಂದು ಎಚ್ಚರಿಸಿದರು.



ಕರ್ನಾಟಕ ರಾಜ್ಯ ದಿನಗೂಲಿ ಕ್ಷೇಮಾಭಿವೃದ್ಧಿ ವಿಧೇಯಕ-2012ನ್ನು 2013ರ ಫೆ.15ರಂದು ಜಾರಿಗೊಳಿಸಿದರೂ, ನೌಕರರಿಗೆ ದೊರೆಯಬೇಕಾದ ಹಲವು ಸೌಲಭ್ಯಗಳನ್ನು ಕಡಿತಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ನಡೆದ ಸುದೀರ್ಘ ಕಾನೂನು ಹೋರಾಟದ ಫಲವಾಗಿ ಹೈಕೋರ್ಟ್ 2026ರ ಫೆ.2ರಂದು 1996ಕ್ಕಿಂತ ಮೊದಲು ನೇಮಕಗೊಂಡ ನೌಕರರಿಗೆ ಪೂರ್ಣ ಪ್ರಮಾಣದ ಸೌಲಭ್ಯ ಕಲ್ಪಿಸುವಂತೆ ಆದೇಶಿಸಿದೆ ಎಂದು ತಿಳಿಸಿದರು.

ಒಕ್ಕೂಟದ ರಾಜ್ಯಾಧ್ಯಕ್ಷ ಚಂದ್ರಶೇಖರ ಬುರಾಣಪೂರ ಮಾತನಾಡಿ, ಅರ್ಹ ನೌಕರರಿಗೆ ಸೇವಾ ಸಕ್ರಮೀಕರಣ, ವೇತನ ಶ್ರೇಣಿ, ನಿವೃತ್ತಿ ಹಾಗೂ ಇತರ ಸಾಮಾಜಿಕ ಭದ್ರತಾ ಸೌಲಭ್ಯ ಕಲ್ಪಿಸಿ, ದಿನಗೂಲಿ ನೌಕರರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಐಟಿಯು ಮುಖಂಡ ಲಕ್ಷ್ಮಣ ಹಂದ್ರಾಳ, ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಕೊಂಡಗೂಳಿ, ಎಂ.ಕೆ. ಕುಲಕರ್ಣಿ, ಕೆ.ಎಂ. ಒಣ-ಕುದರಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಚನ ಸಾಹಿತ್ಯ ಎಲ್ಲರ ಬದುಕನ್ನು ಬೆಳಗಿಸುತ್ತವೆ ಎಂದ ಸೋಮಶೇಖರ ವಾಲಿ

ತಾಳಿಕೋಟೆ: ಅನುಭವದಆಧಾರದಮೇಲೆಸರಳವಾಗಿ ರಚನೆಗೊಂಡಿರುವ ವಚನ ಸಾಹಿತ್ಯ, ಸರ್ವರಿಗೂ ಸರ್ವ ಕಾಲಕ್ಕೂ ಶ್ರೇಷ್ಠವಾದ ಮೌಲ್ಯಗಳಾಗಿದ್ದು ಅವು ಎಲ್ಲರ ಬದುಕನ್ನು ಬೆಳಗಿಸುತ್ತವೆ ಎಂದು ವಿಜಯಪುರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ನಿರ್ದೇಶಕ ಸೋಮಶೇಖರ ವಾಲಿ ಹೇಳಿದರು. ಸ್ಥಳೀಯ ಜೆಎಸ್‌ಜಿ ಪಿಯು ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ಯುವ ಘಟಕ ಹಾಗೂ ಕದಳಿ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶುಕ್ರವಾರ ಮಾತನಾಡಿದರು.ಡಾ.ಆರ್.ಪಿ.ಅಗರವಾಲ. ಜೆಎಸ್ ಜಿ ಕಾಲೇಜಿನ ಕಾರ್ಯದರ್ಶಿ ಶ್ರೀಕಾಂತ ಪತ್ತಾರ, ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಡಾ.ವಿ. ಎಸ್. ಕಾರ್ಚಿ ಮಾತನಾಡಿದರು.

ಶ.ಸಾ.ಪ.ಯುವ ಘಟಕದ ಪ್ರಧಾನ ಕಾರ್ಯದರ್ಶಿ ಸಿದ್ದು ಕರಡಿ ಅವರು ದಿ. ಶಂಕ್ರಪ್ಪ ಪರಪ್ಪ ಸರಶೆಟ್ಟಿ ದಿ. ಪರಪ್ಪ ದೇವಪ್ಪ ಸರಶೆಟ್ಟಿ ಹಾಗೂ ದಿ.ದಾನಮ್ಮ ಪರಪ್ಪ ಸರಶೆಟ್ಟಿ ಅವರ ಬದುಕಿನ ಪರಿಚಯ ಮಾಡಿಕೊಟ್ಟರು. ವಕೀಲ ಗಂಗಾಧರ ಕಸ್ತೂರಿ, ಜಿ.ಎಸ್.ಜಂಬಲದಿನ್ನಿ, ಈರಣ್ಣ ಕಲಬುರ್ಗಿ, ಸುಮಂಗಲಾ ಕಲಬರ್ಗಿ ಹಾಗೂ ಕದಳಿ ವೇದಿಕೆ ಅಧ್ಯಕ್ಷೆ ಉಮಾ ಸಾಲಂಕಿ ಇದ್ದರು.

ಸಂಗೀತ ಶಿಕ್ಷಕ ಗುರುಪಾದ ಬಿರಾದಾರ, ಅಕ್ಷತಾ ಬಿರಾದಾರ ವಚನ ಗಾಯನ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಜಾನಪದ ಪರಿಷತ್ತಿನ ಅಧ್ಯಕ್ಷರಾದ ಬಸವರಾಜ ಗೊರಜಿ, ಸುಜಾತ ಪಾಟೀಲ, ಸುವರ್ಣಾ ಗೋನಾಳ, ಶೋಭಾ ಸಾಲಂಕಿ, ಗಂಗೂಬಾಯಿ ಜಿಗಜಿನ್ನಿ, ಶಿಲ್ಪಾ ಕಿಣಗಿ, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ, ಉಪನ್ಯಾಸಕಿ ಸೌಮ್ಯಾ, ದಿನಕರ ಜೋಶಿ, ಉಪನ್ಯಾಸಕ ಭೀಮು ನಾಯ್ಕ ಇದ್ದರು.

ಸರಣಿ ಅಪಘಾತದಲ್ಲಿ ಗಾಯಗೊಂಡ ಬಾಲಕ ವಿಜಯಪುರದಲ್ಲಿ ಸಾವು

ದೇವರಹಿಪ್ಪರಗಿ: ಬೊಲೆರೊ ಚಾಲಕನ ನಿರ್ಲಕ್ಷ್ಯದಿಂದ ಮಂಗಳವಾರ ಸಂಜೆ ಸಂಭವಿಸಿದ ಸರಣಿ ಅಪಘಾತದಲ್ಲಿ ಗಾಯಗೊಂಡಿದ್ದ ಬಾಲಕ ಸುಮೀತ್ ಭಾವಿಮನಿ (12) ಗುರುವಾರ ಮೃತಪಟ್ಟಿದ್ದಾನೆ.

ಪಟ್ಟಣದ ಇಂಡಿ ರಸ್ತೆಯಲ್ಲಿ ಮಂಗಳವಾರ ಸಂಜೆ ಇಂಗಳಗಿಯಿಂದ ಬಂದ ಬೊಲೆರೊ ವಾಹನ ಸಿದ್ದಪ್ಪ ಹದಗಲ್ ಅವರ ಜಮೀನಿನ ಹತ್ತಿರ ಟಂ ಟಂ ಒಂದಕ್ಕೆ ಡಿಕ್ಕಿ ಹೊಡೆದು ನಂತರ ನೀರು ತರುತ್ತಿದ್ದ ಯುವಕರ ಬೈಕ್‌ಗೆ ಡಿಕ್ಕಿಹೊಡೆದ ಪರಿಣಾಮವಾಗಿ ಒಟ್ಟು 9 ಜನ ಗಾಯಗೊಂಡಿದ್ದರು.

ಗಾಯಾಳುಗಳಲ್ಲಿ 7 ಜನ ಬಸವನ ಬಾಗೇವಾಡಿಯವರಾಗಿದ್ದು ಉಳಿದವರು ಇಂಗಳಗಿ ಗ್ರಾಮದವರು. ಇವರೆಲ್ಲರಲ್ಲಿ ಇಂಗಳಗಿ ಗ್ರಾಮದ ಬೈಕ್ ಸವಾರರಾದ ಸೂರಜ್ ಭಾವಿಮನಿ ಹಾಗೂ ಸುಮೀತ್ ಭಾವಿಮನಿ ತೀವ್ರವಾಗಿ ಗಾಯಗೊಂಡಿ-ದ್ದರು. ಇವರಿಗೆ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೊಬೈಲ್ ಟಾರ್ಚ್ ಬೆಳಕಿನಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆ ನೀಡಿ ನಂತರ ಆಂಬುಲೆನ್ಸ್ ಮೂಲಕ ವಿಜಯಪುರ ಬಿಎಲ್‌ಡಿಇ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳಿಸಲಾಗಿತ್ತು.

ಸುಮಿತ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಯಸಿಂಗಪುರ್ ಪಿಯಾಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಜ್ಞಾನೇಶಕುಮಾರ ರಾಜೀನಾಮೆಗೆ ಆಗ್ರಹ: ಲಾಠಿಚಾರ್ಜ್ ಖಂಡಿಸಿ ಪ್ರತಿಭಟನೆ



ವಿಜಯಪುರ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲಿನ ಲಾಠಿಚಾರ್ಜ್ ಖಂಡಿಸಿ ವಿವಿಧ ಪ್ರಗತಿಪರ ಸಂಘಟನೆಗಳ ವೇದಿಕೆಯ ನೇತೃತ್ವದಲ್ಲಿ ಭಾನುವಾರ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಭಗವಾನ್ ರೆಡ್ಡಿ ಮಾತನಾಡಿ, ಕೇಂದ್ರ ಗೃಹ ಇಲಾಖೆ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕಲು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಲಾಠಿಚಾರ್ಜ್ ಮಾಡಿ, ರಸ್ತೆಗೆ ಬೀಳಿಸಿ ಎಳೆದಾಡಿರುವ ದೃಶ್ಯಗಳು ಪ್ರಜಾಪ್ರಭುತ್ವದ ಕಗ್ಗೊಲೆಗೆ ಸಾಕ್ಷಿಯಾಗಿವೆ ಎಂದು ಹೇಳಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮರಾಯ ಪೂಜಾರಿ ಮಾತನಾಡಿ, ಚುನಾವಣಾ ಆಯುಕ್ತ ಜ್ಞಾನೇಶಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು ಹಾಗೂ ಕಾನೂನುಬಾಹಿರವಾಗಿ ನಡೆಸಲಾಗುತ್ತಿದೆ ಎಂದು ಆರೋಪಿಸಲಾದ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಎದ್ದೇಳು ಕರ್ನಾಟಕ ಹೋರಾಟ ಸಮಿತಿ ಸಂಚಾಲಕ ಅಬ್ದುಲ್ ಖಾದರ್ ಮಾತನಾಡಿ, ಕೇಂದ್ರ ಸರ್ಕಾರ ಸಂವಿಧಾನವನ್ನು ಆಟದ ಗೊಂಬೆಯನ್ನಾಗಿ ಮಾಡಿಕೊಂಡು ಫ್ಯಾಸಿಸ್ಟ್ ನೀತಿಯನ್ನು ಹೇರುತ್ತಿದೆ ಎಂದು ಆರೋಪಿಸಿದರು.

ಮಹಿಳಾ ಮುಖಂಡೆ ಸುರೇಖಾ ರಜಪೂತ, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಮುಖಂಡೆ ಸುನಂದಾ ನಾಯಕ, ಹೋರಾಟಗಾರರಾದ ಲಕ್ಷ್ಮಣ ಹಂದ್ರಾಳ, ಸುರೇಶ ಬಿಜಾಪುರ, ಸಿದ್ದರಾಮಯ್ಯ ಹಿರೇಮಠ, ಫಯಾಜ್ ಕಲಾದಗಿ ಸೇರಿದಂತೆ ಹಲವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ ಎಚ್.ಟಿ., ಭರತಕುಮಾರ ಎಚ್.ಟಿ., ಬಾಳು ಜೇವೂರ, ಸಿದ್ದಲಿಂಗ ಬಾಗೇವಾಡಿ, ಶಿವಬಾಳಮ್ಮ ಕೊಂಡಗೂಳಿ, ಶಿವರಂಜಿನಿ ಎಸ್.ಬಿ., ಸುವರ್ಣಾ ಹಳಗಣಿ, ಸುಮಂಗಲಾ ಆನಂದ ಶೆಟ್ಟಿ, ಸುರೇಖಾ ವಾಘಮೊರೆ, ಖಾಜಾಸಾಬ್, ಬೀರಬ್ಬಿ ಸಾಹುಕಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಜಾನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಜೀವನಾಡಿ: ಮಲ್ಲಿಕಾರ್ಜುನ ಕೆಳಗಡೆ

ವಿಜಯಪುರ: ಜಾನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಜೀವನಾಡಿಯಾಗಿದ್ದು, ಗ್ರಾಮೀಣ ಜನರ ಸುಖ-ದುಃಖ, ನಂಬಿಕೆ, ಆಚರಣೆ ಹಾಗೂ ಜೀವನಪ್ರೀತಿಯನ್ನು ಪ್ರತಿಬಿಂಬಿಸುತ್ತದೆ ಎಂದು ರಾಜ್ಯ ವಾರ್ತಾ ಮತ್ತು ಸಂಪರ್ಕ ಇಲಾಖೆಯ ನಿವೃತ್ತ ನಿರ್ದೇಶಕ ಮಲ್ಲಿಕಾರ್ಜುನ ಕೆಳಗಡೆ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಶನಿವಾರ ಜಿಲ್ಲಾ, ತಾಲೂಕು ಹಾಗೂ ನಗರ ಘಟಕಗಳ ಸಹಯೋಗದಲ್ಲಿ ನಡೆದ ವಿವಿಧ ದತ್ತಿ ಉಪನ್ಯಾಸ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜಾನಪದ ಹಾಡು, ಕಥೆ, ಗಾದೆಗಳು ಇಡೀ ಸಮುದಾಯದ ಆಸ್ತಿಯಾಗಿವೆ. ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ನಗರೀಕರಣದ ಪ್ರಭಾವದಿಂದ ಇಂದಿನ ಯುವಪೀಳಿಗೆ ಜಾನಪದ ಸಂಸ್ಕೃತಿಯಿಂದ ದೂರವಾಗುತ್ತಿದೆ. ಈ ಅಮೂಲ್ಯ ಪರಂಪರೆಯನ್ನು ಉಳಿಸಲು ಶಾಲಾ-ಕಾಲೇಜುಗಳ ಪಠ್ಯಕ್ರಮದಲ್ಲಿ ಜಾನಪದ ಸಾಹಿತ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಡಚಣದ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎಂ.ಎಸ್. ಮಾಂಗಣಗೇರಿ ಮಾತನಾಡಿ, ಜಾನಪದ ಸಾಹಿತ್ಯದ ಸಂರಕ್ಷಣೆ ಮತ್ತು ಪ್ರಸಾರಕ್ಕೆ ಆದ್ಯತೆ ನೀಡುವ ಅಗತ್ಯವಿದೆ ಎಂದರು.

'ಜಾನಪದ ಸಾಹಿತ್ಯದ ಮಹತ್ವ' ಕುರಿತು ಉಪನ್ಯಾಸ ನೀಡಿದ ಶಿಕ್ಷಕಿ ಹಾಗೂ ಸಾಹಿತಿ ರುದ್ರಮ್ಮ ಗಿಡ್ಡಪ್ಪಗೋಳ, ಜಾನಪದ ಸಾಹಿತ್ಯ ಜನರಿಂದ, ಜನರಿಗಾಗಿ, ಜನರಲ್ಲಿಯೇ ಹುಟ್ಟಿಕೊಂಡ ಮೌಖಿಕ ಪರಂಪರೆಯ ಜೀವಂತ ಸಾಹಿತ್ಯವಾಗಿದೆ. ಇದು ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿದೆ ಎಂದು ವಿವರಿಸಿದರು. ಬಿ.ಎಂ. ಶ್ರೀಕಂಠಯ್ಯ ಅವರ 'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಮಾತಿನ ಹಿನ್ನೆಲೆಯಲ್ಲಿ ಜಾನಪದ ಸಾಹಿತ್ಯದ ಮಹತ್ವವನ್ನು ಉದಾಹರಣೆಗಳೊಂದಿಗೆ ವಿವರಿಸಿದರು.

ಸಾಹಿತಿ ಜಯಶ್ರೀ ತೆಗ್ಗಿನಮಠ, ಶೆಟ್ಟವ್ವ ಹರಿಜನ, ಮಹಾನಂದ ಕಾಂಬಳೆ ಮತ್ತು ಮಲ್ಲಮ್ಮ ಹರಿಜನ ಜಾನಪದ ಗೀತೆಗಳನ್ನು ಹಾಡಿದರು. ಮಹೆತಾಬ್ ಕಾಗವಾಡ ಜಾನಪದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ದಿ. ಪೊ?ರ. ತಿಪ್ಪಣ್ಣ ಕರೇಪಗೋಳ ಅವರ ಆಶಯದಂತೆ ಜಾನಪದ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿರುವ ಗ್ರಾಮೀಣ ಮಹಿಳೆಗೆ ನೀಡುವ ದತ್ತಿ ಪುರಸ್ಕಾರವನ್ನು ಸಿಂದಗಿ ತಾಲೂಕಿನ ಸಲಾದಹಳ್ಳಿ ಗ್ರಾಮದ ಜಾನಪದ ಚಿಂತಕಿ ಲಕ್ಷ್ಮೀ (ಗುರುಮ) ಹಿರೇಮಠ ಅವರಿಗೆ ನೀಡಿ ಗೌರವಿಸಲಾಯಿತು.

ಶಾಂತಾ ವಿಭೂತಿ ಪ್ರಾರ್ಥಿಸಿದರು. ಗೌರವ ಕಾರ್ಯದರ್ಶಿ ಶಿಲ್ಪಾ ಭಸ್ಮೆ ಸ್ವಾಗತಿಸಿದರು. ಡಾ. ಮಾಧವ ಗುಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಮಮತಾಮುಳಸಾವಳಗಿ ನಿರೂಪಿಸಿದರು. ಶೋಭಾ ಬಡಿಗೇರ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ, ಅಲ್ಲಮಪ್ರಭು ದೇವಮಲ್ಲಿಕಾರ್ಜುನಮಠ, ಬಿ.ಎಂ. ಅಜೂರ, ಕೆ.ಎಸ್. ಹಣಮಾಣಿ, ಶ್ರೀಕಾಂತ ನಾಡಗೌಡ, ರವಿ ಕಿತ್ತೂರು, ಜಿ.ಎಸ್. ಬಳ್ಳೂರ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ವಿಶ್ರಾಂತ ಮುಖ್ಯ ಅಧ್ಯಾಪಕ ಬಿ.ಕೆ. ಗೋಟ್ಯಾಳ ಪ್ರಸಾದ ಸೇವೆ ನೆರವೇರಿಸಿದರು.

ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿ ಕಲ್ಪಿಸಲು ಆಗ್ರಹ

ವಿಜಯಪುರ: ವಿಜಯಪುರ ಜಿಲ್ಲೆಗೆ ಸಂವಿಧಾನದ 371(ಜೆ) ಅಡಿಯಲ್ಲಿ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಜಿಲ್ಲಾ 371(ಜೆ) ಹೋರಾಟ ಸಮಿತಿ ಮುಖಂಡರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಸಂತ ಹೊನಮೋಡೆ ಅವರಿಗೆ ಮನವಿ ಸಲ್ಲಿಸಿದರು.

371(ಜೆ) ಮೀಸಲಾತಿ ಜಾರಿಗೊಳಿಸುವ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯನ್ನು ಕೈಬಿಟ್ಟಿರುವುದರಿಂದ ಶಿಕ್ಷಣ, ಉದ್ಯೋಗ ಹಾಗೂ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜಿಲ್ಲೆಯ ಜನರಿಗೆ ಅನ್ಯಾಯವಾಗಿದೆ.

ಹೀಗಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ವಿಜಯಪುರ ಜಿಲ್ಲೆಯನ್ನು 371(ಜೆ) ವ್ಯಾಪ್ತಿಗೆ ಸೇರಿಸುವಂತೆ ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.



ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ, ಯುವಕರಿಗೆ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ದೊರೆಯುವ ವಿಶೇಷ ಅನುದಾನ ಸೇರಿದಂತೆ ವಿವಿಧ ಸೌಲಭ್ಯಗಳು ಲಭ್ಯವಾಗಬೇಕು.

ಜಿಲ್ಲೆಯ ಸುಮಾರು 25 ಲಕ್ಷ ಜನರ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಸಂವಿಧಾನದ 371(ಜೆ)ಗೆ ತಿದ್ದುಪಡಿ ಮಾಡಿ ವಿಜಯಪುರ ಜಿಲ್ಲೆಯನ್ನು ಮೀಸಲಾತಿ ವ್ಯಾಪ್ತಿಗೆ ಸೇರಿಸಬೇಕು ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ವಸಂತ ಹೊನಮೋಡೆ ಅವರು, ಹೋರಾಟ ಸಮಿತಿಯ ಬೇಡಿ-ಕೆಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ತಿಳಿಸಿದರು.

ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹಾಗೂ ಜಿಲ್ಲೆಯ ಎಲ್ಲ ಶಾಸಕರ ಗಮನಕ್ಕೆ ತಂದು ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಹಿರಿಯ ಕಾಂಗ್ರೆಸ್ ಮುಖಂಡರು ಹಾಗೂ ಜಿಲ್ಲಾ 371(ಜೆ) ಹೋರಾಟ ಸಮಿತಿ ಮುಖಂಡರಾದ ವಿನೋದ ಖೇಡ, ಲಾಯಪ್ಪ ಇಂಗಳೆ, ಅನಿಲ ಇಕ್ಕಡೆ, ನ್ಯಾಯವಾದಿ ಎನ್. ಸುರೇಶಕುಮಾರ, ಮಹಾದೇವಪ್ಪ ತೇಲಿ, ಸಾಗರ ಸಾವಳಗಿ, ಅರುಣಕುಮಾರ ತೇರದಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವೈದ್ಯಕೀಯ ವಿದ್ಯಾರ್ಥಿಗಳ ಸಮ್ಮೇಳನ ಯಶಸ್ವಿ

ಬೆಳಗಾವಿ: ಇಲ್ಲಿನ ಕೆಎಲ್‌ಇ ಸಂಸ್ಥೆಯ ಜವಾಹರಲಾಲ್ ನೆಹರೂ ವೈದ್ಯಕೀಯ ಮಹಾವಿದ್ಯಾಲಯದ(ಜೆಎನ್‌ಎಂಸಿ) ಸಭಾಂಗಣದಲ್ಲಿ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಆ?ಯಂಡ್ ರಿಸರ್ಚ್(ಕಾಹೇರ್) ಐಎಂಎ-ಎಂಎಸ್‌ಎನ್ ರಾಜ್ಯ ಘಟಕದ ಸಹಯೋಗದಲ್ಲಿ ಎರಡು ದಿನ ನಡೆದ 'ಜಿಜ್ಞಾಸಾ 2026' ರಾಷ್ಟ್ರಮಟ್ಟದ ವೈದ್ಯಕೀಯ ವಿದ್ಯಾರ್ಥಿಗಳ ಸಮ್ಮೇಳನ ಯಶಸ್ವಿಯಾಯಿತು.



ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐಎಂಎ) ರಾಷ್ಟ್ರೀಯ ಘಟಕದ ಮಾಜಿ ಅಧ್ಯಕ್ಷ ಡಾ.ದಿಲೀಪ್ ಭಾನುಶಾಲಿ, 'ವೈದ್ಯರು ಜಾಗತಿಕ ವೈದ್ಯಕೀಯ ರಂಗದ ಭವಿಷ್ಯ ರೂಪಿಸಲು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು' ಎಂದು ಕರೆಕೊಟ್ಟರು.

ಕಾಹೇರ್ ಕುಲಪತಿ ಡಾ.ಸಂದೀಪ ಶ್ರೀವಾಸ್ತವ, ಕುಲಸಚಿವ ಡಾ. ವಿ.ಎಂ.ಪಟ್ಟಣಶೆಟ್ಟಿ, ಜೆಎನ್‌ಎಂಸಿ ಪ್ರಾಚಾರ್ಯ ಡಾ.ರಾಜೇಶ ಪವಾರ, ಐಎಂಎ?ಎಂಎಸ್‌ಎನ್ ಕರ್ನಾಟಕ ಘಟಕದ ಅಧ್ಯಕ್ಷ ಡಾ.ಜಸ್ಪಾಲ್ ಸಿಂಗ್ ತೆಹಾಲಿಯಾ, ಐಎಂಎ ರಾಜ್ಯ ಘಟಕದ ಅಧ್ಯಕ್ಷ ಡಾ. ವೀರಭದ್ರಯ್ಯ ಟಿ.ಎ., ಡಾ.ಪಿಯೂಷ್ ಜೈನ, ಡಾ.ಶಿವಕುಮಾರ ಉತ್ತೂರೆ, ಡಾ.ಸ್ವಪ್ನಿಲ್ ಭಲೋದಿಯಾ ಇದ್ದರು.

ವಿದ್ಯಾರ್ಥಿಗಳು ವಿವಿಧ ಪ್ರಬಂಧ ಮಂಡಿಸಿದರು. ಕಾರ್ಯಾಗಾರ, ಚರ್ಚೆ ನಡೆದವು.

ಕ್ರೀಡಾಕೂಟ: ಕಳ್ಳಕವಟಗಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ

ವಿಜಯಪುರ: ವಿಜಯಪುರ ಗ್ರಾಮೀಣ ತಾಲ್ಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟ ಅರ-ಕೇರಿಯ ಜ್ಞಾನಜ್ಯೋತಿ ವಸತಿ ಶಾಲೆಯಲ್ಲಿ ನಡೆಯಿತು. ಕಳ್ಳಕವಟಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ವಿವಿಧ ಕ್ರೀಡಾ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

14 ವರ್ಷದೊಳಗಿನ ಬಾಲಕರ ವಾಲಿಬಾಲ್‌ನಲ್ಲಿ ವಿಷ್ಣು ರಾಠೋಡ್, ಆದಿತ್ಯ ರಾಠೋಡ್, ದರ್ಶನ್ ರಾಠೋಡ್, ಸಾಯಿನಾಥ ರಾಠೋಡ್, ಕುಮಾರ್ ರಾಠೋಡ್ ಹಾಗೂ ದಿನೇಶ ಪವಾರ ಅವರು ಉತ್ತಮ ಪ್ರದರ್ಶನ ನೀಡಿ ತಾಲ್ಲೂಕು ಮಟ್ಟದಲ್ಲಿ ಜಯಗಳಿಸಿ ಜಿಲ್ಲಾಮಟ್ಟಕ್ಕೆ ಅರ್ಹತೆ ಪಡೆದಿದ್ದಾರೆ.



17 ವರ್ಷದೊಳಗಿನ ಬಾಲಕಿಯರ '4100 ಮೀಟರ್ ರಿಲೇಯಲ್ಲಿ ಪ್ರತೀಕ್ಷಾ ಕೊಟ್ಟಲಗಿ, ಶ್ರಷ್ಠಿ ವಾಲಿಕಾರ, ಅಂಜಲಿ ದಂಡಿನ ಹಾಗೂ ಪ್ರಿಯಾಂಕಾ ಅಟಪಳಕರ ಅವರ ತಂಡ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದೆ.

ವಿದ್ಯಾರ್ಥಿಗಳ ಸಾಧನೆಗೆ ಮುಖ್ಯಶಿಕ್ಷಕ ಎಂ.ಎಂ.ಮಕಾನದಾರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಮಾರುತಿ ಎಲ್. ಜಾಧವ ಸಂತಸ ವ್ಯಕ್ತಪಡಿಸಿ, ಜಿಲ್ಲಾಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದರು.ಎಸ್‌ಡಿಎಂಸಿ ಅಧ್ಯಕ್ಷ ಗುರಪ್ಪ ಗಿದ್ನವರ, ಸರ್ವ ಸದಸ್ಯರು, ಗ್ರಾಮಸ್ಥರು, ಪಾಲಕ-ಪೋಷಕರು, ಶಿಕ್ಷಕರಾದ ಆರ್.ಎಸ್. ಚಿಕ್ಕಮಠ, ನಾಗೇಶ್, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಪೌಷ್ಟಿಕ ಆಹಾರ ಸೇವನೆಯಿಂದ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ: ಸಿಡಿಪಿಒ ರೋಹಿಣಿ



ಅಳವಂಡಿ: ಮಕ್ಕಳ, ಗರ್ಭಿಣಿಯರ ಹಾಗೂ ಹಾಲುಣಿಸುವ ತಾಯಂದಿರ ಪೌಷ್ಟಿಕಾಂಶದ ಸ್ಥಿತಿ ಸುಧಾರಿಸುವ ಉದ್ದೇಶದಿಂದ ಪೋಷಣ್ ಮಾಸಾಚರಣೆ ಅಭಿಯಾನ ಜಾರಿಗೊಳಿಸಲಾಗಿದೆ ಎಂದು ಸಿಡಿಪಿಒ ರೋಹಿಣಿ ಹೇಳಿದರು.

ಸಮೀಪದ ಕವಲೂರು ಗ್ರಾಮದಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನದಡಿ ಹಮ್ಮಿಕೊಂಡಿದ್ದ ಪೋಷಣ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಪೌಷ್ಟಿಕತೆ, ಕುಂಠಿತ ಬೆಳವಣಿಗೆ ಹಾಗೂ ರಕ್ತಹೀನತೆ ಕಡಿಮೆ ಮಾಡುವುದು ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ಮುಕ್ತರಾಗಿ ಆರೋಗ್ಯವಂತರಾಗುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು' ಎಂದರು.

ಪಿಡಿಒ ಸಂಜಯ ಚವಡಾಳ ಮಾತನಾಡಿ, 'ಫಲಾನುಭವಿಗಳು ಪೋಷಣ ಅಭಿಯಾನದಡಿ ದೊರೆಯುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಅಂಗನವಾಡಿ ಮೇಲ್ವಿಚಾರಕಿ ರೆಹಮತ್ ಬಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಸೀಮಂತ ಹಾಗೂ ಮಕ್ಕಳಿಗೆ ಅನ್ನಪ್ರಾಶನ ಕಾರ್ಯಕ್ರಮ ನೆರವೇರಿಸಲಾಯಿತು. ಪ್ರಮುಖರಾದ ಹೊನಕೆರಪ್ಪ ಮುಕ್ಕಣ್ಣವರ, ತಿಮ್ಮಣ್ಣ ಸಿದ್ನೆಕೊಪ್ಪ, ಹನುಮಂತ ಹೊಸಮನಿ, ಸಂಜೀವಕುಮಾರ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಇದ್ದರು.

17ರಿಂದ ಕೊಪ್ಪಳದಲ್ಲಿ ದಾಂಡಿಯಾ ಉತ್ಸವ: ಶಾಸಕ ಕೆ. ರಾಘವೇಂದ್ರ



ಕೊಪ್ಪಳ: ದಸರಾ ಅಂಗವಾಗಿ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ವತಿಯಿಂದ ಅ.17 ಹಾಗೂ 18ರಂದು ತಾಲ್ಲೂಕು ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ ಕೊಪ್ಪಳ ದಸರಾ ದಾಂಡಿಯಾ ಉತ್ಸವ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಂಸ್ಥೆ ಅಧ್ಯಕ್ಷರೂ ಆದ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಹೇಳಿದರು.

ನಗರದ ಶಾಸಕರ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಉತ್ಸವದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು 'ಎರಡೂ ದಿನ ಸಂಜೆ ದಾಂಡಿಯಾ ಉತ್ಸವ ಜರುಗಲಿದ್ದು, ಸಂಘಟಕ–ರೇ ಮಹಿಳೆಯರಿಗೆ ಉಚಿತವಾಗಿ ಕೋಲುಗಳನ್ನು ವಿತರಿಸುತ್ತಾರೆ' ಎಂದು ತಿಳಿಸಿದರು.

ದಸರಾ ಮತ್ತು ವಿಜಯದಶಮಿ ದೇಶದಾದ್ಯಂತ ವೈಭವದಿಂದ ಆಚರಿಸಲ್ಪಡುವ ಪ್ರಮುಖ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಬ್ಬ. ಬರ ತಲೆದೋರಿದ್ದು, ರೈತರು ಸೇರಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ದುರ್ಗಾದೇವಿಯನ್ನು ಪ್ರಾರ್ಥಿಸಲಾಗುತ್ತಿದೆ. ಬರ ಪರಿಸ್ಥಿತಿ ಎದುರಿಸುತ್ತಿದ್ದೇವೆ' ಎಂದರು.

ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಲಾಗಿದ್ದು, ಪೊಲೀಸ್ ಬಂದೋಬಸ್ತ್ ಒದಗಿಸಲಾಗುತ್ತಿದೆ. ಸಿಸಿಟಿವಿ ಕ್ಯಾಮೆರಾ ಸೌಲಭ್ಯ ಒದಗಿಸಲಾಗುತ್ತದೆ. ದುರ್ಗಾದೇವಿಗೆ ಪ್ರಸಿದ್ಧ ಅರ್ಚಕರಿಂದ ಪೂಜೆ ನೆರವೇರಲಿದೆ. ಆರತಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಮಾಜಿ ಸಂಸದ ಸಂಗಣ್ಣ ಕರಡಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಬಿ.ನಾಗರಳ್ಳಿ, ಉದ್ಯಮಿ ಶ್ರೀನಿವಾಸ ಗುಪ್ತಾ, ಮುಖಂಡ ಗಾಳೆಪ್ಪ ಪೂಜಾರ ಪಾಲ್ಗೊಂಡಿದ್ದರು.

ಕೊಪ್ಪಳ: ಟವರ್ ಹಾಕುವ ನೆಪ;6.10 ಲಕ್ಷ ವಂಚನೆ

ಕೊಪ್ಪಳ: ಸಾಮಾಜಿಕ ಜಾಲತಾಣಗಳಲ್ಲಿ ಕಂಗೊಳಿಸುವ ಎಲ್ಲ ಜಾಹೀರಾತುಗಳು ಅಧಿಕೃತವಲ್ಲ, ಅವುಗಳನ್ನು ನೋಡಿ ಮೋಸ ಹೋಗಬೇಡಿ ಎಂದು ಜನರಲ್ಲಿ ಅನೇಕ ಬಾರಿ ಜಾಗೃತಿ ಮೂಡಿಸಿದರೂ ಜನ ಮತ್ರ ಅವುಗಳ 'ಖೆಡ್ಡಾ'ಕ್ಕೆ ಮೇಲಿಂದ ಮೇಲೆ ಬೀಳುತ್ತಲೇ ಇದ್ದಾರೆ.

ಹೀಗೆ ಸೈಬರ್ ವಂಚಕರು ತೋಡುತ್ತಿರುವ ಮೋಸದ ಗುಂಡಿಗೆ ಬಿದ್ದು ಅನೇಕರು ಹಣ ಕಳೆದುಕೊಳ್ಳುತ್ತಿರುವ ಘಟನೆಗಳು ನಡೆಯುತ್ತಿದ್ದು ಈಗ ಇನ್‌ಸ್ಟಾಗ್ರಾಂನಲ್ಲಿ ಬಂದ ಜಾಹೀರಾತು ನಿಜವೆಂದು ನಂಬಿ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಗುತ್ತೂರಿನ ಧರಿಯಪ್ಪ ಎಂಬ ಯುವಕ 6.10 ಲಕ್ಷ ಕಳೆದುಕೊಂಡಿದ್ದಾರೆ.



ಬಿಎಸ್‌ಎನ್‌ಎಲ್ ಟವರ್ ಕುರಿತು ಇನ್‌ಸ್ಟಾಗ್ರಾಂನಲ್ಲಿ ಬಂದ ಜಾಹೀರಾತು ನೋಡಿದ ಧರಿಯಪ್ಪ ಅದರಲ್ಲಿ ನೀಡಲಾಗಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದಾರೆ. ಟವರ್ ಹಾಕಿಸಿದರೆ 60 ಲಕ್ಷ ಮುಂಗಡ ಹಣ ಹಾಗೂ ಪ್ರತಿ ತಿಂಗಳಿಗೆ 50 ಸಾವಿರ ಬಾಡಿಗೆ ಕೊಡುತ್ತೇವೆ ಎಂದು ವಂಚಕರು ನಂಬಿಸಿದ್ದು, ಇದನ್ನು ನಿಜವೆಂದು ನಂಬಿಕೊಂಡಿದ್ದೇ ವಂಚಕರಿಗೆ ಬಂಡವಾಳವಾಗಿದೆ.

ಟವರ್ ಹಾಕುವ ಪೂರ್ವದಲ್ಲಿ ಅದಕ್ಕೆ ಬೇಕಾದ ಸಲಕರಣೆಗಳನ್ನು ಖರೀದಿಸಲು ಸಾಮಗ್ರಿ, ಜಿಎಸ್‌ಟಿ ಹಣ, ರಸ್ತೆ ತೆರಿಗೆ, ಜಾಗೆಯ ಮೌಲ್ಯದ ಹಣ ಮತ್ತು ವಿಮಾ ಮೊತ್ತ ಹೀಗೆ ಹಲವು ಹಣ ಪಾವತಿಸಬೇಕು ಎಂದು ವಂಚಕ ನಂಬಿಸಿದ್ದಾನೆ. ಕಡಿಮೆ ಬಂಡವಾಳ ಹಾಕಿದರೆ ಹೆಚ್ಚು ಲಾಭ ಗಳಿಸಬಹುದುಎನ್ನುವಆಸೆಯಿಂದಧರಿಯಪ್ಪಇದೆಲ್ಲವನ್ನೂ ನಿಜವೆಂದು ನಂಬಿದ್ದು ಹಂತಹಂತವಾಗಿ ವಿವಿಧ ಬ್ಯಾಂಕ್‌ಗಳ ಖಾತೆಯಿಂದ ಅಪರಿಚಿತರಿಗೆ ಹಣ ಪಾವತಿ ಮಾಡಿದ್ದಾರೆ. ಬಳಿಕ ವಂಚಕ ಮೊಬೈಲ್ ಟವರ್ ಅಳವಡಿಸದೆ ಹಾಗೂ ಹಣವನ್ನೂ ವಾಪಸ್ ಕೊಡದೇ ಮೋಸ ಮಾಡಿದ್ದಾನೆ. ನೊಂದವರು ಈ ಕುರಿತು ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ಮೊಬೈಲ್ ಜೊತೆ ಹಣವೂ ಹೋಯಿತು

ಮತ್ತೊಂದುಪ್ರಕರಣದಲ್ಲಿಕುಷ್ಟಗಿತಾಲ್ಲೂಕಿನತಾವರಗೇರಾದ ಗುತ್ತಿಗೆದಾರ ವೀರನಗೌಡ ಎಂಬುವವರು ಬಸ್‌ನಲ್ಲಿ ತೆರಳುವಾಗ ಮೊಬೈಲ್ ಫೋನ್ ಕಳೆದುಕೊಂಡಿದ್ದು, ಇದರ ಜೊತೆಗೆ ಬ್ಯಾಂಕ್ ಖಾತೆಯಲ್ಲಿದ್ದ ಹಣವೂ ವಂಚಕರ ಪಾಲಾಗಿದೆ.

ಸೆಪ್ಟೆಂಬರ್ 24ರಂದು ವೀರನಗೌಡ ಬಸ್‌ನಲ್ಲಿ ಪ್ರಯಾಣಿಸುವಾಗ ಮೊಬೈಲ್ ಕಳೆದುಕೊಂಡಿದ್ದರು. ಈ ಮೊಬೈಲ್‌ನಲ್ಲಿದ್ದ ಫೋನ್ ಪೇ ಆಯಪ್ ದುರ್ಬಳಕೆ ಮಾಡಿಕೊಂಡು 96 ಸಾವಿರ ಬೇರೆ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲಾಗಿದೆ.

ವನ್ಯಜೀವಿಗಳ ಉಳಿವಿಗೆ ಯುವಪೀಳಿಗೆ ಸಂಕಲ್ಪ ಮಾಡಲು ಸಲಹೆ



ಕೊಪ್ಪಳ: 'ಅರಣ್ಯ ಮತ್ತು ವನ್ಯಜೀವಿಗಳು ಮಾನವನ ಅಸ್ತಿತ್ವಕ್ಕೆ ಅಗತ್ಯವಾಗಿದ್ದು, ಅವುಗಳ ಉಳಿವಿಗಾಗಿ ಯುವಪೀಳಿಗೆ ಸಂಕಲ್ಪ ಮಾಡಬೇಕು' ಎಂದು ಕೊಪ್ಪಳ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ ಎನ್.ಕೆ.ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕೊಪ್ಪಳ ಅರಣ್ಯ ವಿಭಾಗದ ವತಿಯಿಂದ ವನ್ಯಜೀವಿ ಸಪ್ತಾಹದ ಅಂಗವಾಗಿ ನಗರದ ಓಜನಹಳ್ಳಿ ರಸ್ತೆಯ ಜ್ಞಾನ ಬಂಧು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಇತ್ತೀಚೆಗೆ ನಡೆದ ವನ್ಯಜೀವಿ ಸಂರಕ್ಷಣೆ ಕುರಿತ ವಿಚಾರಸಂಕಿರಣ ಹಾಗೂ ಜಾಗೃತಿ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ಕಾಡು ಮತ್ತುಪ್ರಾಣಿಗಳನಾಶದಿಂದಪರಿಸರ ವ್ಯವಸ್ಥೆ ಏರುಪೇರಾಗಲಿದ್ದು, ಮನುಕುಲವೇ ಸಂಕಷ್ಟಕ್ಕೆ ಸಿಲುಕುವ ಅಪಾಯವಿದೆ. ಹೀಗಾಗಿ, ವನ್ಯಜೀವಿ ಸಂರಕ್ಷಣೆ ಕೇವಲ ಅರಣ್ಯ ಇಲಾಖೆಯ ಕರ್ತವ್ಯವಷ್ಟೇ ಅಲ್ಲ; ಸಮಾಜದ ಪ್ರತಿಯೊಬ್ಬ ನಾಗರಿಕರ ನೈತಿಕ ಹೊಣೆಗಾರಿಕೆ' ಎಂದರು.

ವನ್ಯಜೀವಿ ತಜ್ಞಸಮದ್ ಕೊಟ್ಟೂರು ಅವರು ಉಪನ್ಯಾಸ ನೀಡಿ 'ಪರಿಸರ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಜಿಲ್ಲೆಯು ವೈವಿಧ್ಯಮಯ ವನ್ಯಜೀವಿ ಸಂಪತ್ತು ಹೊಂದಿದ್ದು, ಅವುಗಳ ಪರಿಚಯ ಮತ್ತು ಸಂರಕ್ಷಣೆಗೆ ಸಾರ್ವಜನಿಕರು ಹಾಗೂ ಯುವಜನತೆ ಮುಂದಾಗಬೇಕು' ಎಂದು ಹೇಳಿದರು.

ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುಸೇನ ಬಸಿಯಾ ಪೆಂಡಾರಿ, ಕೊಪ್ಪಳ ಉಪ–ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎಚ್. ಮುಲ್ಲಾ, ಸಾಮಾಜಿಕ ಅರಣ್ಯ ಉಪ–ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗಾಯತ್ರಿ ಲೋಕಣ್ಣವರ, ಕಾಲೇಜಿನ ಪ್ರಾಚಾರ್ಯೆ ಜ್ಯೋತಿ, ರವೀಂದ್ರ ಜೆ,ಮುನಿರಾಬಾದ್‌ವಲಯಅರಣ್ಯಾಧಿಕಾರಿ ಬಳ್ಳಾರಿ ರಾಘವೇಂದ್ರ ಪಾಲ್ಗೊಂಡಿದ್ದರು.

ಕನಕಗಿರಿ: ಮತದಾರರ ಪಟ್ಟಿ ಪರಿಷ್ಕರಣೆ ರದ್ದು ಪಡಿಸಲು ಆಗ್ರಹ



ಕನಕಗಿರಿ: 'ಪ್ರಜಾಪ್ರಭುತ್ವದಲ್ಲಿ ಜನರ ಅತ್ಯಂತ ಪವಿತ್ರವಾದ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿರುವ ಚುನಾವಣಾ ಆಯೋಗದ ದೋಷಪೂರಿತ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು' ಎಂದು ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ)ಹಾಗೂಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯ ಪದಾಧಿಕಾರಿಗಳು ಶುಕ್ರವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ಡಿವೈಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಅಮರೇಶ ಕಡಗದ ಮಾತನಾಡಿ, 'ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಜೆಪಿಯ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಒಂದು ಕಾಲದಲ್ಲಿ ಟಿ.ಎನ್. ಶೇಷನ್ ಅವರಂತಹ ದಿಟ್ಟಅಧಿಕಾರಿಗಳಿಂದಜಗತ್ತಿನಲ್ಲೇಅತ್ಯುನ್ನತ ಗೌರವ ಹೊಂದಿದ್ದ ಸ್ವತಂತ್ರ ಚುನಾವಣಾ ಆಯೋಗವು ಇಂದು ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿಯಾಗಿ ಬದಲಾಗಿದೆ ಇದಕ್ಕೆ ಕಾರಣೀಕರ್ತ ಜ್ಞಾನೇಶ್‌ಕುಮಾರ್ ಅವರನ್ನು ವಜಾಗೊಳಿಸಬೇಕು' ಎಂದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಶಿವಕುಮಾರ ಈಚನಾಳಮಾತನಾಡಿದರು.ಪ್ರಮುಖರಾದ ಸೈಯದ್ ಸುಭಾನ ಹುಲಿಹೈದರ, ತಿರುಪತಿ ಎಳ್ಳಬೆಂಚಿ,ತಿಮ್ಮಣ್ಣ,ಶರಣಪ್ಪ,ಯಮನೂರ, ಮೌನೇಶ ಇದ್ದರು.

ಕೊಪ್ಪಳ| ಕೇಂದ್ರ ಸರಕಾರದ ದಮನಕಾರಿ ಕ್ರಮ ಖಂಡಿಸಿ ವಿವಿಧ ಸಂಘಗಳಿಂದ ಪಂಜಿನ ಮೆರವಣಿಗೆ



ಕನಕಗಿರಿ: ಅಕ್ರಮ SIR ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಹಾಗೂ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ದಿಲ್ಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯನ್ನು ದಮನಿಸಿ ಸಿಪಿಐ(ಎಂ) ನಾಯಕರನ್ನು ಬಂಧಿಸಿರುವ ಕೇಂದ್ರ ಗೃಹ ಇಲಾಖೆಯ ಕ್ರಮವನ್ನು ಖಂಡಿಸಿ ಪಟ್ಟಣದಲ್ಲಿ CPIM, DYFI, SFI, CITU ಸಂಘಟನೆಗಳಿಂದ ಪಂಜಿನ ಮೆರವಣಿಗೆ ನಡೆಯಿತು.

ದಿಲ್ಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕೇರಳ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಬೃಂದಾ ಕಾರಟ್ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನು ತಡೆಯಲು ರೈಲು, ಮೆಟ್ರೋ ಸೇವೆ ಸ್ಥಗಿತಗೊಳಿಸಿ, ಇಂಟರ್ನೆಟ್ ನಿರ್ಬಂಧಿಸಿ, ಬ್ಯಾರಿಕೇಡ್ ಹಾಕಿರುವುದು ಅಘೋಷಿತ ತುರ್ತು ಪರಿಸ್ಥಿತಿ ಹೇರಿದಂತಿದೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟಿಸಿದ ವಿದ್ಯಾರ್ಥಿ ಸಂಘಟನೆಗಳ ಮುಖಂಡರ ಬಂಧನವನ್ನು ಕೂಡ ನಾವು ಖಂಡಿಸುತ್ತೇವೆ ಎಂದು ನಾಯಕರು ಹೇಳಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಬಾಳಪ್ಪ ಹುಲಿಹೈದರ, CITU ತಾಲೂಕು ಸಂಚಾಲಕ ಮಲ್ಲಪ್ಪ ಮ್ಯಾಗಡೆ, DYFI ಜಿಲ್ಲಾ ಸಂಚಾಲಕ ಅಮರೇಶ ಕಡಗದ, SFI ತಾಲೂಕು ಅಧ್ಯಕ್ಷ ಹನುಮೇಶ ಮ್ಯಾಗಡೆ, ಪರಶುರಾಮ, ಮೌಲಾ ಸಾಬ್, ವೆಂಕಟೇಶ ಭಾವಿಕಟ್ಟಿ, ನಬಿಸಾಬ ಹಣಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರೈತರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಸರ್ಕಾರ ವಿಫಲವೆಂದು ಪ್ರತಿಭಟನೆ



ಹನುಮಸಾಗರ: ರೈತರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವಿಫಲವಾಗಿವೆ ಎಂದು ಆರೋಪಿಸಿ, ವಿವಿಧ ಬೇಡಿಕೆಗಳ ಈಡೇರಿ–ಕೆಗೆ ಆಗ್ರಹಿಸಿ ರೈತ ಸಂಘಟನೆಗಳ ಮುಖಂಡರು ಶುಕ್ರವಾರ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘ, ಕುಷ್ಟಗಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ, ಹನುಮಸಾಗರ ಘಟಕದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರೈತರ ಸಂಪೂರ್ಣ ಸಾಲಮನ್ನಾ, ಬರ ಪರಿಹಾರವನ್ನು ಕನಿಷ್ಠ 25 ಸಾವಿರಕ್ಕೆ ಹೆಚ್ಚಿಸುವುದು, ಗೋಶಾಲೆ ಹಾಗೂ ಮೇವು ಬ್ಯಾಂಕ್‌ಗಳ ಸ್ಥಾಪನೆ, ಬೆಳೆ ವಿಮೆ ಪಾವತಿಸಿದ ಅರ್ಹ ರೈತರಿಗೆ ಪರಿಹಾರ ವಿತರಣೆ ಮತ್ತು ಕುಷ್ಟಗಿ ತಾಲೂಕಿನ ಎಲ್ಲ ಕೆರೆಗಳನ್ನು ತುಂಬಿಸುವಂತೆ ಒತ್ತಾಯಿಸಲಾಯಿತು.

ಕೃಷಿ ವೆಚ್ಚ ಹೆಚ್ಚಳ, ಬೆಳೆ ನಷ್ಟ ಹಾಗೂ ನೀರಿನ ಅಭಾವದಿಂದರೈತರುತೀವ್ರಆರ್ಥಿಕಸಂಕಷ್ಟ ಎದುರಿಸುತ್ತಿದ್ದಾರೆ. ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿ–ದ್ದು, ಜಾನುವಾರುಗಳಿಗೆ ಮೇವು ಮತ್ತು ನೀರಿನ ಸಮಸ್ಯೆಯೂ ಎದುರಾಗಿದೆ.

ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಬೇಕಾದ ಸರ್ಕಾರಗಳು ನಿರ್ಲಕ್ಷ್ಯ ವಹಿಸುತ್ತಿರುವುದು ಖಂಡನೀಯ. ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ಘೋಷಣೆಗಳಿಗೆ ಸೀಮಿತವಾಗದೆ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಹನುಮಸಾಗರ ನಗರ ಘಟಕದ ಅಧ್ಯಕ್ಷ ಯಮನೂರಪ್ಪ ಮಡಿವಾಳರ ಮಾತನಾಡಿ, ರೈತರ ಸಾಲದ ಹೊರೆ ತಗ್ಗಿಸಲು ಸಂಪೂರ್ಣ ಸಾಲಮನ್ನಾ ಜಾರಿಗೊಳಿಸಬೇಕು. ಬರದಿಂದ ಬೆಳೆ ಕಳೆದುಕೊಂಡ ರೈತರಿಗೆ ಸಮರ್ಪಕ ಪರಿಹಾರ ನೀಡಬೇಕು. ಬೆಳೆ ವಿಮೆ ಪಾವತಿಸಿದ ಅರ್ಹ ರೈತರಿಗೆ ವಿಳಂಬವಿಲ್ಲದೆ ಪರಿಹಾರ ತಲುಪಿಸಬೇಕು. ರೈತರ ಹಕ್ಕುಗಳ ರಕ್ಷಣೆಯಲ್ಲಿ ಸರ್ಕಾರಗಳು ನಿರ್ಲಕ್ಷ್ಯ ತೋರಿದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಕುಷ್ಟಗಿ ತಾಲೂಕು ಪ್ರಧಾನ ಕಾರ್ಯದರ್ಶಿ ಶರಣಪ್ಪ ಬಾಚಲಾಪೂರ ಮಾತನಾಡಿ, ಕುಷ್ಟಗಿ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಆದ್ಯತೆ ನೀಡಬೇಕು.

ಜಾನುವಾರುಗಳ ಸಂರಕ್ಷಣೆಗಾಗಿ ಗೋಶಾಲೆ ಹಾಗೂ ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಬೇಕು. ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಉಪತಹಶೀಲ್ದಾರ್ ವಿಜಯಲಕ್ಷ್ಮಿ ಮುಂಡರಗಿ ರೈತ ಮುಖಂಡರಿಂದ ಮನವಿ ಸ್ವೀಕರಿಸಿ, ಬೇಡಿಕೆಗಳನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಹನುಮಸಾಗರ, ಚಳಗೇರಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಪಕ್ಷಾತೀತವಾಗಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ಕುಷ್ಟಗಿ ತಾಲೂಕು ಅಧ್ಯಕ್ಷೆ ಸಂಗಮ್ಮ ಗುಳಗೌಡ್ರ, ಕಾರ್ಯದರ್ಶಿ ಅಮರೇಗೌಡ ಪಾಟೀಲ, ಕರ್ನಾಟಕ ರಾಜ್ಯ ರೈತ ಸೇನೆಯ ರಾಜ್ಯಾಧ್ಯಕ್ಷ ನೀಲಪ್ಪ ಕಡಿಯವರು, ಕರ್ನಾಟಕ ಜನದರ್ಶನ ವೇದಿಕೆಯ ರಾಜ್ಯಾಧ್ಯಕ್ಷ ದೇವಪ್ಪ ಮೆಣಸಗಿ, ಮುಖಂಡರಾದ ಸೂಚಪ್ಪ ದೇವರಮನಿ, ಶಿವಪುತ್ರಪ್ಪ ಕೊಳೂರು, ಬಸವರಾಜ ಮೋಟಗಿ, ಮಲ್ಲಪ್ಪ ಪಟ್ಟಣಶೆಟ್ಟರ್, ಶರಣಪ್ಪ ಹಡಪದ, ಕೊಡ್ಲಪ್ಪ ಹಡಪದ, ಚಾಂದ್ ಬಾಷಾ ಹುನಗುಂದ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಯುವ ಸಂಸತ್‌ನಿಂದ ಪ್ರಜಾಪ್ರಭುತ್ವದ ಅರಿವು ಹೆಚ್ಚಳ



ಕಾರಟಗಿ: 'ದೇಶದ ಭವಿಷ್ಯದ ಪ್ರಜೆಗಳಾಗಿರುವ ಯುವಜನರು ಪ್ರಜಾಪ್ರಭುತ್ವದ ಆಶಯ, ಸಂಸದೀಯ ವ್ಯವಸ್ಥೆ ಹಾಗೂ ಜನಪ್ರತಿನಿಧಿಗಳ ಜವಾಬ್ದಾರಿ, ತಮ್ಮ ಹಕ್ಕು, ಜವಾಬ್ದಾರಿಗಳನ್ನು ತಿಳಿಯಬೇಕಾದ ಅಗತ್ಯ ಇದೆ' ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹುಲುಗಪ್ಪ ಹೇಳಿದರು.

ಸಮೀಪದ ನಾಗನಕಲ್‌ನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಗುರುವಾರ ತಾಲ್ಲೂಕು ಆಡಳಿತ ಸಹಿತ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಾಗೂ ತಾಲ್ಲೂಕು ಮಟ್ಟದ ಯುವ ಸಂಸತ್ ರಚನೆ ಸಭೆಯಲ್ಲಿ ಮಾತನಾಡಿದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ನಾಯಕ ತೊಂಡಿಹಾಳ, ವಕೀಲ ಮಹೇಶಸ್ವಾಮಿ ಕುಲಕರ್ಣಿ, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಸರಸ್ವತಿ, ಸಮಾಜ ಕಲ್ಯಾಣ ಇಲಾಖೆಯ ಶರಣಪ್ಪ ಹುಂಡಿ ಮಾತನಾಡಿದರು.

ಗ್ರೇಡ್2 ತಹಶೀಲ್ದಾರ್ ಷಣ್ಮುಖಪ್ಪ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಸಂಯೋಜಕ ಶಶಿಧರಸ್ವಾಮಿ, ಪಾಲಿಟೆಕ್ನಿಕ್ ಕಾಲೇಜು ಅಧೀಕ್ಷಕ ಮೋಹನ್, ಕಸಾಪ ತಾಲ್ಲೂಕಾಧ್ಯಕ್ಷ ಶರಣಪ್ಪ ಕೋಟ್ಯಾಳ, ಜಾನಪದ ಅಕಾಡೆಮಿ ಸದಸ್ಯ ಮಹಿಬೂಬ ಕಿಲ್ಲೇದಾರ್, ಕಂದಾಯ

ಇಲಾಖೆ ಅಧಿಕಾರಿ ಅನಿತಾ, ಶಾರದಾ ಪ್ರಸಾದ ವಕೀಲ ಸೇರಿದಮತೆ ಇತರರು ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಗಂಗಪ್ಪ ಬಿ, ಮಂಜುನಾಥ ಅಗಸಿಮನಿ, ಪಂಪನಗೌಡ, ಶಿವಶಂಕರ್ ನಿರ್ವಹಿಸಿದರು.

ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಜೆಡಿಎಸ್ ಕರೆ



ಕೊಪ್ಪಳ: ಈಶಾನ್ಯಶಿಕ್ಷಕರಕ್ಷೇತ್ರದಿಂದವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಶಶೀಲ್ ನಮೋಶಿ ಅವರ ಗೆಲುವು ಈಗಾಗಲೇ ಖಚಿತವಾಗಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಭರವಸೆ ವ್ಯಕ್ತಪಡಿಸಿದರು.

ಪಕ್ಷದ ಜಿಲ್ಲಾ ಕಚೇರಿಯಲ್ಲಿ ಶುಕ್ರವಾರ ನಡೆದ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು 'ಕಾಂಗ್ರೆಸ್ ಪಕ್ಷದ ದುರಾಡಳಿತ, ಕೆಪಿಎಸ್‌ಸಿ ನೇಮಕಾತಿಯಲ್ಲಿ ಹಗರಣ, ಬರ ನಿರ್ವಹಣೆಯಲ್ಲಿ ವೈಫಲ್ಯ ಹಾಗೂ ಆಂತರಿಕ ಕಲಹದಿಂದ ಹಳಿ ತಪ್ಪಿದ ಆಡಳಿತ ವ್ಯವಸ್ಥೆಯ ವಿರುದ್ಧ ಶಿಕ್ಷಕರು ರೋಸಿ ಹೋಗಿದ್ದಾರೆ. ಶಿಕ್ಷಕರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಪಕ್ಷ ಯಾವ ಕಾರ್ಯಕ್ರಮವನ್ನೂ ಸರಿಯಾಗಿ ಅನುಷ್ಠಾನಗೊಳಿಸಿಲ್ಲ' ಎಂದರು.

ಜನರು ತಮ್ಮ ಹಕ್ಕುಗಳನ್ನು ಮಂಡಿಸಿದರೆ ಪೊಲೀಸ್ ಇಲಾಖೆಯನ್ನು ಉಪಯೋಗಿಸಿಕೊಂಡು ಪ್ರಕರಣ ದಾಖಲಿಸುವ ಕೆಟ್ಟ ಪರಂಪರೆಯನ್ನು ಕಾಂಗ್ರೆಸ್ ಕೊಪ್ಪಳದಲ್ಲಿ ಆರಂಭಿಸಿದೆ. ಗ್ರಾಮೀಣ ಪ್ರದೇಶಕ್ಕೆ ಭೇಟಿ ಕೊಟ್ಟ ಎಲ್ಲಾ ಕಡೆಗಳಲ್ಲಿಯೂ ಶಾಸಕ ರಾಘವೇಂದ್ರ ಹಿಟ್ನಾಳಗೆ ವಿರೋಧ ವ್ಯಕ್ತವಾಗಿರುವುದು ಮತದಾರರ ಮುಂದಿನ ನಿರ್ಧಾರದ ದ್ಯೋತಕ' ಎಂದು ಹೇಳಿದರು

ಪಕ್ಷದ ಜಿಲ್ಲಾಧ್ಯಕ್ಷ ಸುರೇಶ ಭೂಮರಡ್ಡಿ, ತಾಲ್ಲೂಕು ಗೌರವಾಧ್ಯಕ್ಷ ಈಶಪ್ಪ ಮಾದಿನೂರು, ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು, ಜಿಲ್ಲಾ ಓಬಿಸಿ ಘಟಕದ ಅಧ್ಯಕ್ಷ ಕರಿಯಪ್ಪ ಹಾಲವರ್ತಿ, ಮುಖಂಡರಾದ ವೀರೇಶಗೌಡ್ರು ದಳಪತಿ, ಶರಣಪ್ಪ ಜಡಿ, ಮಂಜುನಾಥ ಸೊರಟೂರ, ಮೂರ್ತ್ಯಪ್ಪ ಹಿಟ್ನಾಳ, ರಮೇಶ ಡಂಬ್ರಳ್ಳಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಅಕ್ರಮ ಗಣಿಗಾರಿಕೆ: 146 ಮೆಟ್ರಿಕ್ ಟನ್ ಮರಳು ವಶ

ಗುತ್ತಲ: ಸಮೀಪದ ಹಾವನೂರ ಮತ್ತು ಹರಳಹಳ್ಳಿ ಗ್ರಾಮಗಳ ತುಂಗಭದ್ರಾ

ನದಿ ದಡದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಸುತ್ತಿದ್ದವರ ಮೇಲೆ ತಹಶೀ ಲ್ದಾರ್ ಶರಣಮ್ಮ ಅವರ ನೇತೃತ್ವ ದಲ್ಲಿ ಶನಿವಾರ ದಾಳಿ ಮಾಡಿ 146 ಮೆಟ್ರಿಕ್ ಟನ್ ಮರಳು ವಶಪಡಿಸಿಕೊಂಡಿದ್ದಾರೆ.

ಹಾವನೂರ ಮತ್ತು ಹರಳಹಳ್ಳಿ ಗ್ರಾಮಗಳ ತುಂಗಭದ್ರಾ ನದಿಯ ದಡದಲ್ಲಿ ನಿರಂತರವಾಗಿ ಮರಳು ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಲಾಗಿದೆ.

ಮರಳು ಗಣಿಗಾರಿಕೆ ನಡೆಸುವವರು ಓಡಿ ಹೋಗಿದ್ದಾರೆಂದು ತಿಳಿದು ಬಂದಿದೆ.

ನದಿಗೆ ಹೋಗುವ ದಾರಿಗಳಿಗೆ ಜೆಸಿಬಿ ಸಹಾಯದಿಂದ ಟ್ರಂಚ್ ಹೊಡೆ ಯಲಾಯಿತು.

ಕಂದಾಯ ನಿರೀಕ್ಷಕ ಆರ್.ಎನ್.ಮಲ್ಲಾಡದ, ಗ್ರಾಮ ಲೆಕ್ಕಾಧಿಕಾರಿ ಪ್ರಶಾಂತ ಲೆಕ್ಕಣ್ಣನವರ, ಲಿಂಗರಾಜ ಬೋರಗಲ್ಲಪ್ಪನವರ, ಪ್ರಕಾಶ ಉಜನಿ ಮುಂತಾದವರು ಪಾಲ್ಗೊಂಡಿದ್ದರು.

ಶಿವಾನಂದ ಕೌಜಲಗಿ ಜನ್ಮದಿನ: ನೇತ್ರ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ



ಬೈಲಹೊಂಗಲ: ಸಮಾಜ ಸೇವೆ ಮೂಲಕ ಜನಮಾನಸದಲ್ಲಿ ವಿಶೇಷ ಸ್ಥಾನ ಪಡೆದಿರುವ ಮಾಜಿ ಸಚಿವ ಶಿವಾನಂದ ಎಚ್. ಕೌಜಲಗಿ ಅವರ 87 ನೇ ವರ್ಷದ ಜನ್ಮದಿನ ಆಚರಣೆ ಅಂಗವಾಗಿ ನಗರದ ತಾಲ್ಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಆರೋಗ್ಯ ರಕ್ಷಾ ಸಮಿತಿ ವತಿಯಿಂದ ನೇತ್ರ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಯಶಸ್ವಿಯಿಂದ ನಡೆಯಿತು.

ಶಾಸಕ ಮಹಾಂತೇಶ ಕೌಜಲಗಿ ಶಿಬಿರ ಉದ್ಘಾಟಿಸಿ ಮಾತನಾಡಿ, 'ಬಡ ಹಾಗೂ ಅಗತ್ಯವಿರುವ ಜನರಿಗೆ ನೇತ್ರ ಆರೈಕೆ ಮತ್ತು ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಪೂಜ್ಯ ತಂದೆ, ಮಾಜಿ ಸಚಿವ ಶಿವಾನಂದ ಕೌಜಲಗಿ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಬಡ ಜನತೆ ಆರೋಗ್ಯ ಶಿಬಿರದ ಸದುಪಯೋಗ ಪಡೆಸಿಕೊಳ್ಳಬೇಕು' ಎಂದರು.

ಮುಖ್ಯ ವೈದ್ಯಾಧಿಕಾರಿ ಡಾ.ರವೀಂದ್ರ ಜಕನೂರ ಮಾತನಾಡಿ, 'ನಾಡಿನ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರಾದ ಮಾಜಿ ಸಚಿವ ಶಿವಾನಂದ ಕೌಜಲಗಿ ಅವರ ಜನ್ಮ ದಿನ ಆಚರಣೆ ಅಂಗವಾಗಿ ಬಡ ಜನತೆಗೆ ಆರೋಗ್ಯ ಶಿಬಿರ ನಡೆಸಿ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ನೆರವೇರಿಸಿದ ಕೌಜಲಗಿ ಅವರ ಪರಿವಾರಕ್ಕೆ ಕೃತಜ್ಞತೆ ತಿಳಿಸಿದರು.

ನೇತ್ರ ಶಸ್ತ್ರಚಿಕಿತ್ಸಕ ಡಾ.ಎನ್.ಐ.ಸಂಸುದ್ದಿ ತಂಡದ ಸದಸ್ಯರು ಫಲಾನುಭವಿಗಳಿಗೆ ಯಶಸ್ವಿಯಾಗಿ ನೇತ್ರ ಶಸ್ತ್ರಚಿಕಿತ್ಸೆ ನೆರವೇರಿಸಿದರು. ಶಸ್ತ್ರಚಿಕಿತ್ಸೆಯ ಸದುಪಯೋಗ ಪಡೆದುಕೊಂಡ ಫಲಾನುಭವಿಗಳಿಗೆ ಅಗತ್ಯ ಕಿಟ್‌ಗಳನ್ನು ವಿತರಿಸಲಾಯಿತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಘಟಕ ಅಧ್ಯಕ್ಷ ಡಾ.ಮಹಾಂತೇಶ ಕಳ್ಳಿಬಡ್ಡಿ, ರಾಮನಗೌಡ ಪಾಟೀಲ, ಆಶೋಕ ಭದ್ರಶೆಟ್ಟಿ, ಅನೀಶ ಕೌಜಲಗಿ, ತಾಲ್ಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯರು, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಗಳು, ಸಿಬ್ಬಂದಿ, ಶಿಬಿರದ ಫಲಾನುಭವಿಗಳು ಇದ್ದರು.

ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ: ವಿಜಯ ಪೂಜಾರಿ



ಬೈಲಹೊಂಗಲ: ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಸದೃಢ ಆರೋಗ್ಯದೊಂದಿಗೆ ಸಾಧನೆ ಮಾಡಬೇಕು ಎಂದು ಹುಬ್ಬಳ್ಳಿ ಮೆದುಳು ಮತ್ತು ಬೆನ್ನುಹುರಿ ಶಸ್ತ್ರಚಿಕಿತ್ಸಾ ತಜ್ಞ ವಿಜಯ ಪೂಜಾರಿ ಹೇಳಿದರು.

ಅಕ್ಕಮಹಾದೇವಿ ಮಹಿಳಾ ಪದವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಆಯೋಜಿಸಿದ್ದ 'ಮಹಿಳೆ ಮತ್ತು ಆರೋಗ್ಯ' ವಿಷಯದ ಕುರಿತು ಮಾತನಾಡಿದರು.

ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಕಷ್ಟು ಅವಕಾಶಗಳು ಹಾಗೂ ಸೌಲಭ್ಯಗಳು ದೊರೆಯುತ್ತಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಮುನ್ನಡೆಯ ಬೇಕು ಎಂದರು.

ಡಾ.ಸಾಗರ ಕುಲಕರ್ಣಿ, ಪ್ರಾಚಾರ್ಯ ಡಾ.ಸಿ.ಬಿ.ಗಣಾಚಾರಿ ಮಾತನಾಡಿದರು. ಎನ್‌ಎಸ್‌ಎಸ್ ಅಧಿಕಾರಿ ಎಂ.ಎಚ್.ಪೇಂಟೇದ್, ವಿ.ಡಿ.ಮಾಕಾರ ಹಾಜರಿದ್ದರು. ಮಂಜುಳಾ ಚೌರಿ ಸ್ವಾಗತಿಸಿದರು.

ನಾಗಮ್ಮ ಹಿರಗನ್ನವರ ವಂದಿಸಿದರು. ನಿಶಾ ಮುಕುಂದ ನಿರೂಪಿಸಿದರು.

ಕನಸು ನನಸು ಮಾಡಿದ 'ವಿಶ್ವಾಸ' ವೈದ್ಯ



ಸವದತ್ತಿ: ಮಲಪ್ರಭೆ ಪಕ್ಕದಲ್ಲೇ ಹರಿದರೂ ಹನಿ ನೀರಿಗೆ ಪರದಾಡಿದ ಊರು ಸವದತ್ತಿ. ಯಲ್ಲಮ್ಮನ ಸನ್ನಿಧಿಗೆ ಕೋಟ್ಯಂತರ ಭಕ್ತರು ಬಂದರೂ ಸೌಲಭ್ಯಗಳಿಲ್ಲದೆ ಬಳಲಿದ ಕ್ಷೇತ್ರ. ಈ ಚಿತ್ರಣ ಈಗ ಬದಲಾಗುತ್ತಿದೆ. ಇದರ ಹಿಂದಿರುವ ಹೆಸರು ಶಾಸಕ ವಿಶ್ವಾಸ ವೈದ್ಯ. ದಶಕಗಳಿಂದ ಕಡತಗಳಲ್ಲಿ ದೂಳು ಹಿಡಿದಿದ್ದ ಬೇಡಿಕೆಗಳು ಅವರ ಮೊದಲ ಅವಧಿಯಲ್ಲೇ ಒಂದೊಂದಾಗಿ ಸಾಕಾರಗೊಳ್ಳುತ್ತಿವೆ. ಮೊದಲ ಅವಧಿಯಲ್ಲೇ 15ರಿಂದ 20 ವರ್ಷಗಳ ಕೆಲಸ ಮಾಡಿದ ನಾಯಕ ಎಂಬ ಮಾತು ಕ್ಷೇತ್ರದಲ್ಲಿ ಜನಜನಿತ.

ಸರಳತೆಯ ಹಾದಿ: ಕೃಷಿ ಮಾರುಕಟ್ಟೆಯ ದಲ್ಲಾಳಿ ಅಂಗಡಿಯಿಂದ ಬದುಕು ಆರಂಭಿಸಿದ ವೈದ್ಯ ಅವರು, ಸಚಿವ ಸತೀಶ ಜಾರಕಿಹೊಳಿ ಅವರನ್ನು ರಾಜಕೀಯ ಗುರುವಾಗಿ ಸ್ವೀಕರಿಸಿ ಜನಸೇವೆಗೆ ಇಳಿದರು. ಜಾತಿ ಮತದ ಲೆಕ್ಕಾಚಾರಕ್ಕಿಂತ ಅಭಿವೃದ್ಧಿಯನ್ನೇ ನೆಚ್ಚಿ ಮತ ಕೇಳಿದರು. ಇಂದು ಶಾಸಕರಾಗಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಹಾಗೂ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಜವಾಬ್ದಾರಿ ಹೊತ್ತಿದ್ದಾರೆ. ಅಧಿಕಾರದ ಹಮ್ಮಿಲ್ಲದ ಸಜ್ಜನಿಕೆ ಅವರ ದೊಡ್ಡ ಆಸ್ತಿ. ಕ್ರೀಡೆ ಮತ್ತು ಯುವಜನರ ಕಡೆಗಿನ ಅವರ ಒಲವು ಅಭಿಮಾನಿ ಬಳಗವನ್ನೇ ಸೃಷ್ಟಿಸಿದೆ.

ಒಂದು ಕ್ಷೇತ್ರ, ಹಲವು ಬದಲಾವಣೆ: ದೇವಿಯ ಸನ್ನಿಧಿಗೆ ಹೊಸ ಶಕ್ತಿ: ಮುಖ್ಯಮಂತ್ರಿ ಹಾಗೂ ಹಿರಿಯ ಸಚಿವರೊಂದಿಗೆ ನಿರಂತರ ಚರ್ಚೆ ನಡೆಸಿ, ದೇವಸ್ಥಾನ ಮತ್ತು ಪ್ರವಾಸೋದ್ಯಮಕ್ಕೆ ಎರಡು ಪ್ರತ್ಯೇಕ ಪ್ರಾಧಿಕಾರಗಳನ್ನು ರಚಿಸಿದರು. ತಮ್ಮ ಅಧಿಕಾರ ಸೀಮಿತವಾಗಿತ್ತು ಎಂದು ಗೊತ್ತಿದ್ದರೂ ಭಕ್ತರ ಹಿತಕ್ಕಾಗಿ ಹಿಂಜರಿಯಲಿಲ್ಲ.

ನಗರಸಭೆಯ ಗೌರವ: 1876ರಲ್ಲಿ ಸ್ಥಾಪನೆಯಾದ ಪುರಸಭೆ 149 ವರ್ಷಗಳ ಬಳಿಕ ನಗರಸಭೆಯ ಸ್ಥಾನಕ್ಕೇರಿದೆ. 1,200 ವರ್ಷಗಳ ಇತಿಹಾಸವುಳ್ಳ ಪಟ್ಟಣಕ್ಕೆ ಇದು ತಡವಾಗಿ ಸಂದ ಗೌರವ.

24X7 ಕುಡಿಯುವ ನೀರಿನ ಯೋಜನೆ ಅಂತಿಮ ಹಂತದಲ್ಲಿದೆ. ನದಿ ಸೇರುತ್ತಿದ್ದ ತ್ಯಾಜ್ಯ ತಡೆಯಲು 41 ಕೋಟಿಯ ಒಳಚರಂಡಿ ಯೋಜನೆಗೆ ಅನುಮೋದನೆ ಸಿಕ್ಕಿದ್ದು, ಟೆಂಡರ್ ಹಂತದಲ್ಲಿದೆ.

ರೈತನ ಹೊಲಕ್ಕೆ ನೀರು: 1978ರಲ್ಲಿ ಆರಂಭವಾದ ಏತ ನೀರಾವರಿ ಯೋಜನೆಗಳ ಹಳೆ ಯಂತ್ರಗಳ ಬಗ್ಗೆ ಸದನದಲ್ಲಿ ಧ್ವನಿ ಎತ್ತಿ, 8 ಯೋಜನೆಗಳ ಪುನಃಶ್ಚೇತನಕ್ಕೆ 150 ಕೋಟಿ ಮೀಸಲಿರಿಸಿದರು.


ಬಡವರ ಆರೋಗ್ಯ: ತಾಲ್ಲೂಕು ಆಸ್ಪತ್ರೆಯನ್ನು 250 ಹಾಸಿಗೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಸುಮಾರು 157 ಕೋಟಿ ಮೀಸಲಾಗಿದೆ. ಡಯಾಲಿಸಿಸ್ ಕೇಂದ್ರ ಆರಂಭವಾಗಿದೆ. ಮೂರು ನಮ್ಮ ಕ್ಲಿನಿಕ್‌ಗಳು ಶೀಘ್ರ ಸೇವೆ ಆರಂಭಿಸಲಿವೆ. ಯರಗಟ್ಟಿಗೆ 100 ಹಾಸಿಗೆಯ ಆಸ್ಪತ್ರೆ ಮತ್ತು ಮುನವಳ್ಳಿ ಮುರಗೋಡ ಕೇಂದ್ರಗಳ ಉನ್ನತೀಕರಣಕ್ಕೂ ಒಪ್ಪಿಗೆ ದೊರೆತಿದೆ.

ಸುಂದರ ಸವದತ್ತಿ: ಸಾವಿರ ಆಲಂಕಾರಿಕ ದೀಪಗಳಿಗೆ 5.80 ಕೋಟಿ, ವೃತ್ತಗಳ ಅಭಿವೃದ್ಧಿಗೆ 3 ಕೋಟಿ ಹಾಗೂ ಎಪಿಎಂಸಿಯಿಂದ ಕೆಂಚಲಾರಕೊಪ್ಪದವರೆಗೆ ವಾಯುವಿಹಾರ ಮಾರ್ಗ ನಿರ್ಮಾಣಕ್ಕೂ ಅನುದಾನ ಮೀಸಲಾಗಿದೆ.

ಬಡ ಹೆಣ್ಣುಮಕ್ಕಳ ಮದುವೆಗೆ ವೈದ್ಯ ಕುಟುಂಬದ ನೆರವು: ಮಗಳ ಮದುವೆ ಎಂದರೆ ಪ್ರತಿ ತಂದೆ?ತಾಯಿಗೂ ಸಂತಸ, ಜೊತೆಗೆ ಹೊರಲಾರದ ಹೊರೆಯೂ ಹೌದು. ಅದರಲ್ಲೂ ಬಡ ಕುಟುಂಬಗಳಿಗೆ ಅಡುಗೆ ಪಾತ್ರೆಯಿಂದ ಹಿಡಿದು ಖರ್ಚು ಹೊಂದಿಸುವುದೇ ದೊಡ್ಡ ಚಿಂತೆ. ಈ ಚಿಂತೆಗೆ ಹೆಗಲು ಕೊಟ್ಟು ನಿಂತಿದ್ದು ಶಾಸಕ ವಿಶ್ವಾಸ ವೈದ್ಯ ಅವರ ಕುಟುಂಬ. ಅವರ 'ಅಣ್ಣನ ಉಡುಗೊರೆ' ಕಾರ್ಯಕ್ರಮ ಹಲವು ಬಡ ಮನೆಗಳಲ್ಲಿ ಸಂಭ್ರಮದ ದೀಪ ಬೆಳಗಿದೆ.

ಮಾತಿಗಿಂತ ಕೃತಿಯೇ ದೊಡ್ಡದು ಎಂದು ನಂಬಿ ನಡೆಯುತ್ತಿರುವ ವಿಶ್ವಾಸ ವೈದ್ಯ ಅವರ ಸೇವಾ ಪಯಣ ಇನ್ನಷ್ಟು ಎತ್ತರಕ್ಕೆ ಸಾಗಲಿ. ಯಲ್ಲಮ್ಮ ದೇವಿ ಅವರಿಗೆ ಆಯುರಾರೋಗ್ಯ ನೀಡಲಿ.

ಹಿಪ್ಪರಗಿ ಬ್ಯಾರೇಜ್‌ನಿಂದ ನೀರು ಪೋಲು, ರೈತರಿಗೆ ಆತಂಕ



ಅಥಣಿ: ಹಿಪ್ಪರಗಿ ಬ್ಯಾರೇಜ್‌ನ 22, 12 ಮತ್ತು 13ನೇ ಗೇಟ್‌ಗಳಿಂದ ಸೋರಿಕೆ–ಯಾಗುತ್ತಿದ್ದು, ನೀರಾವರಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ತಾಲ್ಲೂಕಿನ ರೈತರು ಹಾಗೂ ಕಬ್ಬು ಬೆಳೆಗಾರರು ಆತಂಕ ಎದುರಿಸುವಂತಾಗಿದೆ.

ನೀರನ್ನು ತಕ್ಷಣ ತಡೆಗಟ್ಟಬೇಕು. ಜಿಲ್ಲಾಧಿಕಾರಿಗಳು ಹಾಗೂ ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳು ಬ್ಯಾರೇಜ್‌ನ ಎಲ್ಲ ಗೇಟ್‌ಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ಶಹಜಹಾನ ಡೊಂಗರಗಾಂವ ಒತ್ತಾಯಿಸಿದರು.

ಹಿಪ್ಪರಗಿ ಬ್ಯಾರೇಜ್‌ನ ಮೂರು ಗೇಟ್‌ಗಳಿಂದ ಸೋರಿಕೆಯಾಗುತ್ತಿರುವ ನೀರನ್ನು ಭಾನುವಾರ ಪರಿಶೀಲಿಸಿದ ಬಳಿಕ ಮಾತನಾಡಿದರು.

ಒಂದೆಡೆ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದೆ ಬೆಳೆಗಳಿಗೆ ನೀರು ಹಾಯಿಸಲು ತೊಂದರೆಯಾಗುತ್ತಿದೆ. ಇನ್ನೊಂದೆಡೆ ಸಂಗ್ರಹಿಸಬೇಕಾದ ನೀರು ಸೋರಿಕೆ–ಯಾಗಿ ಪೋಲಾಗುತ್ತಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ ಬ್ಯಾರೇಜ್‌ನ ಗೇಟ್‌ಗಳನ್ನು ಬಂದ್ ಮಾಡಿದ್ದರೂ, ತಾಂತ್ರಿಕ ದೋಷದಿಂದ ಸೋರಿಕೆಯಾಗುತ್ತಿರುವ ನೀರನ್ನು ತಡೆಗಟ್ಟುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ ವರ್ಷ 22ನೇ ಗೇಟ್‌ನಲ್ಲಿ ತಾಂತ್ರಿಕ ದೋಷದಿಂದ ಗೇಟ್ ಮುರಿದು ಮೂರು ಟಿಎಂಸಿ ನೀರು ಪೋಲಾಗಿತ್ತು. ಬಳಿಕ ಹೊಸ ಗೇಟ್ ಅಳವಡಿಸಲು ಪ್ರಯತ್ನಿಸಲಾಯಿತಾದರೂ, ಅದು ಸರಿಯಾಗಿ ಹೊಂದಾಣಿಕೆಯಾಗದ ಹಿನ್ನೆಲೆಯಲ್ಲಿ ಹಳೆಯ ಗೇಟ್‌ನ್ನೇ ದುರಸ್ತಿಗೊಳಿಸಿ ಮರು ಅಳವಡಿಸಲಾಗಿತ್ತು. ಗೇಟ್‌ಗಳ ಸ್ಥಿತಿ ಸಮರ್ಪಕವಾಗಿಲ್ಲದ ಕಾರಣ ನೀರು ಸೋರಿಕೆಯಾಗುತ್ತಿದೆ ಎಂದು ದೂರಿದರು.

ಪ್ರತಿದಿನ ಇದೇ ರೀತಿ ನೀರು ಪೋಲಾಗುತ್ತಿದ್ದರೆ ಮುಂದಿನ ಒಂದೆರಡು ತಿಂಗಳಲ್ಲಿ ತಾಲೂಕಿನ ಜನರು ತೀವ್ರ ನೀರಿನ ಸಮಸ್ಯೆ ಎದುರಿಸಬೇಕಾಗುತ್ತದೆ.

ಗೇಟ್‌ಗಳ ದುರಸ್ತಿಗಾಗಿ ರಾಜ್ಯ ಸರ್ಕಾರ ಟೆಂಡರ್ ಕರೆದಿದ್ದರೂ, ಕಾಮಗಾರಿ ಪೂರ್ಣಗೊಳ್ಳುವವರೆಗೆ ನೀರು ಪೋಲಾಗದಂತೆ ತಾತ್ಕಾಲಿಕ ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಬ್ಯಾರೇಜ್‌ನಲ್ಲಿ ಕೇವಲ 4.36 ಟಿಎಂಸಿ ನೀರು ಸಂಗ್ರಹವಿದೆ. ಆದ್ದರಿಂದ ಜಿಲ್ಲಾಡಳಿತ ಹಾಗೂ ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಬರ ಪರಿಹಾರ ಕಾಮಗಾರಿ ಆರಂಭಿಸಿ: ಜಿಲ್ಲಾಡಳಿತ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಕ್ಷಣ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮ ಪಂಚಾಯಿತಿಗಳ ಮೂಲಕ ಉದ್ಯೋಗ ಒದಗಿಸಬೇಕು ಹಾಗೂ ಜಾನುವಾರುಗಳಿಗೆ ಮೇವು ಬ್ಯಾಂಕ್ ಆರಂಭಿಸಬೇಕು ಎಂದರು.

ರೈತ ಮುಖಂಡರಾದ ದುಂಡಪ್ಪ ನಿಂಗನೂರ, ಶಬ್ಬೀರ್ ಗೌಡ ಪಾಟೀಲ, ವರ್ಧಮಾನ ಕಡೋಲಿ, ಚಂದ್ರಶೇಖರ ಉಣ್ಣಿ ಉಪಸ್ಥಿತರಿದ್ದರು.

ಮೌಲ್ಯಾಧಾರಿತ ಶಿಕ್ಷಣದ ಕೊರತೆ ಮತ್ತು ಸಮುದಾಯದ ಶಾಲೆಗಳ ಸ್ಥಾಪನೆ ಅನಿವಾರ್ಯ: ಹಜರತ್ ಮೌಲಾನಾ ಮುಜ್ಮಾಮಿಲ್ ಸಾಹೀಬ್



ಮಾಲೂರು : ತಾಲ್ಲೂಕು ಲಕ್ಕೂರು ಹೋಬಳಿ ವ್ಯಾಪ್ತಿಯ ಚಿಕ್ಕತಿರುಪತಿ ಸಮೀಪವಿರುವ ಗೋಲ್ಡನ್ ಗ್ರೂಫ್ ಆಫ್ ಇನ್ಸ್ಟಿಟ್ಯೂಟ್ಸ್ ನ ಪ್ರಮುಖ ವೇದಿಕೆಯಲ್ಲಿ ಮೌಲ್ಯಾಧಾರಿತ ಶಿಕ್ಷಣದ ಪ್ರಾಮುಖ್ಯತೆ ಕುರಿತು ವಿಶೇಷ ಉಪನ್ಯಾಸ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ರಾಜ್ಯದ ಪ್ರಸಿದ್ಧ ವಾಗ್ಮಿಗಳಾದ ಹಜರತ್ ಮೌಲಾನಾ ಮುಜ್ಮಾಮಿಲ್ ಸಾಹೀಬ್ ರವರು ಮಾತನಾಡುತ್ತಾ "ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಾಣಿಜ್ಯೀಕರಣ ಹಾಗೂ ನೈತಿಕ ಮೌಲ್ಯಗಳ ಕೊರತೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

"ಇಂದು ಶಿಕ್ಷಣದ ಹೆಸರಿನಲ್ಲಿ ವ್ಯಾಪಾರ ನಡೆ–ಯುತ್ತಿದ್ದು, ಶಾಲೆಗಳ ದುಬಾರಿ ಶುಲ್ಕ ಕೇಳಿ ಪೋಷಕರಿಗೆ ಆತಂಕವಾಗುತ್ತಿದೆ. ಶಿಕ್ಷಣದೊಂದಿಗೆ ಸಂಸ್ಕಾರ (ತರ್ಬಿಯತ್) ಇಲ್ಲದಿದ್ದರೆ ಅದು ವ್ಯರ್ಥ. ಮುಸ್ಲಿಮರು ಶಿಕ್ಷಣದ ಹೆಸರಿನಲ್ಲಿ ತಮ್ಮ ಧರ್ಮದ ನಂಬಿಕೆಯನ್ನು (ಈಮಾನ್) ಎಂದಿಗೂ ಪಣಕ್ಕಿಡಲು ಸಾಧ್ಯವಿಲ್ಲ" ಎಂದು ಸ್ಪಷ್ಟಪಡಿಸಿದರು.

ಸ್ವಾತಂತ್ರ್ಯದ ನಂತರದ ಪರಿಸ್ಥಿತಿಯಿಂದಾಗಿ ಮಸೀದಿ ಮತ್ತು ಮದ್ರಸಾಗಳಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಶಾಲೆಗಳ ಕಡೆಗೆ ಗಮನಹರಿಸಲು ಸಾಧ್ಯವಾಗಿರಲಿಲ್ಲ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮದೇ ಆದ ಶಾಲೆಗಳನ್ನು ಸ್ಥಾಪಿಸುವುದು ಅತ್ಯಂತ ಅಗತ್ಯವಾಗಿದೆ. ಸಮುದಾಯದ ಹೆಣ್ಣು ಮತ್ತು ಗಂಡು ಮಕ್ಕಳ ಭವಿಷ್ಯ ಹಾಗೂ ಧರ್ಮದ ರಕ್ಷಣೆಗಾಗಿ ಹಗಲು–ರಾತ್ರಿ ಶ್ರಮಿಸಬೇಕಾಗಿದೆ ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಗೋಲ್ಡನ್ ಗ್ರೂಫ್ ಆಫ್ ಇನ್ಸ್ಟಿಟ್ಯೂಟ್ಸ್ ನ ಸಂಸ್ಥಾಪಕ ಅಧ್ಯಕ್ಷರಾದ ಇಕ್ಬಾಲ್ ಖಾನ್, ಕಾರ್ಯನಿರ್ವಾಹಕ ಅಧಿಕಾರಿಗಳಾದ ಸೀರಾಜ್ ಅಹಮ್ಮದ್, ಪ್ರಾಂಶುಪಾಲರಾದ ಸೈಯಾದ್ ನಿಖಾತ್, ರಹಮತ್ ಉಲ್ಲಾ, ಹುಸ್ನಾ ,ರವರು ಮಾತನಾಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಹಜರತ್ ಮೌಲಾನಾ ಮುಫ್ತಿ ಅಬ್ದುಲ್ ಸಾದೀಕ್, ಗೋಲ್ಡನ್ ಗ್ರೂಫ್ ಆಫ್ ಇನ್ಸ್ಟಿಟ್ಯೂಟ್ಸ್ ನ ಉಪನ್ಯಾಸಕರು, ಶಿಕ್ಷಕರು, ಸಿಬ್ಬಂದಿ ವರ್ಗ ಹಾಜರಿದ್ದರು.

ಏಳು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಣೆಗೆ ಪ್ರಸ್ತಾವನೆ ಸಲ್ಲಿಕೆ



ರಬಕವಿ–ಬನಹಟ್ಟಿ : ತೇರದಾಳ ವಿಧಾನಸಭಾ ಕ್ಷೇತ್ರದ ತೇರದಾಳ, ರಬಕವಿ–ಬನಹಟ್ಟಿ ನಗರಸಭೆ ವ್ಯಾಪ್ತಿ ಸೇರಿದಂತೆ ಆಸಂಗಿ, ಜಗದಾಳ, ಯಲ್ಲಟ್ಟಿ–ಬಂಡಿಗಣಿ ಹಾಗೂ ಮದಭಾಂವಿ ಗ್ರಾಮಗಳ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಏಳು ಸಾವಿರಕ್ಕೂ ಅಧಿಕ ಕುಟುಂಬಗಳಿಗೆ ಡಿ–ಫಾರೆಸ್ಟ್ ಪ್ರಕ್ರಿಯೆಯಡಿ ಹಕ್ಕುಪತ್ರ ವಿತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ತಿಳಿಸಿದರು.

ರಾಮಪುರದ ದಾನೇಶ್ವರಿ ಕಲ್ಯಾಣಮಂಟಪದಲ್ಲಿ ಇತ್ತೀಚೆಗೆ ಜರುಗಿದ ಅವರ ಜನ್ಮ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಹಕ್ಕುಪತ್ರ ವಿತರಣೆಯ ಪ್ರಸ್ತಾವನೆ ಶೀಘ್ರವೇ ಕಾರ್ಯರೂಪಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮಠ–ಮಾನ್ಯಗಳಿಗೆ ಅನುದಾನ ಒದಗಿಸುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಜವಳಿ ಉದ್ಯಮದ ಅಭಿವೃದ್ಧಿಗಾಗಿ ಜವಳಿ ಪಾರ್ಕ್ ಹಾಗೂ ಕೋನ್ ಡೈಯಿಂಗ್ ಘಟಕ ಸ್ಥಾಪನೆಗೆ ಒತ್ತು ನೀಡಲಾಗಿದ್ದು, ಮುಖ್ಯಮಂತ್ರಿಗಳ ಸಹಮತವೂ ದೊರೆತಿದೆ ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ದಯಾನಂದ ಪಾಟೀಲ, ಭೀಮಶಿ ಮಗದುಮ್, ಬಸವರಾಜ ಕೊಕಟನೂರ, ಲಕ್ಷ್ಮಣ ದೇಸಾರಟ್ಟಿ, ಮಲ್ಲಪ್ಪ ಸಿಂಗಾಡಿ, ದೇವಲ ದೇಸಾಯಿ, ಸುರೇಶ ಪಾಟೀಲ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

ರಬಕವಿಯಲ್ಲಿ ಪುಸ್ತಕಾವಲೋಕನ–58: ಚಾಮರಸನ ಪ್ರಭುಲಿಂಗ ಲೀಲೆ ಮಹೋನ್ನತ ಕಾವ್ಯ



ರಬಕವಿ : ಕನ್ನಡ ಸಾರಸ್ವತ ಲೋಕಕ್ಕೆ ಬಹುದೊಡ್ಡ ಕಾಣಿಕೆ ನೀಡಿದ ಪ್ರಭುಲಿಂಗ ಲೀಲೆಯನ್ನು ಚಾಮರಸ ಕವಿ ಹನ್ನೊಂದು ದಿನಗಳಲ್ಲಿ ಭಾಮಿನಿ ಷಟ್ಪದಿಯಲ್ಲಿ ಬರೆದರು. ಇದೊಂದು ಮಹೋನ್ನತ ಕಾವ್ಯವಾಗಿದೆ. ಹನ್ನೆರಡನೆಯ ಶತಮಾನದ ಮಹಾಶಿವಶರಣ ಅಲ್ಲಮ ಪ್ರಭುದೇವರು ಯೋಗವನ್ನು ಕರಗತ ಮಾಡಿಕೊಂಡು ಕಲ್ಯಾಣಕ್ಕೆ ಬಂದರು. ಅಲ್ಲಮಪ್ರಭು ಹೆಜ್ಜೆ ಇಟ್ಟಲ್ಲೆಲ್ಲಾ ಬೆಳಕು ಎಂದು ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು ಮಹಾಸ್ವಾಮಿಗಳು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ ಬನಹಟ್ಟಿ, ವಲಯ ಮಹಾಲಿಂಗಪುರ ಇವರ ಸಂಯುಕ್ತಾಶ್ರಯದಲ್ಲಿ ರಬಕವಿಯ ಉದ್ದಿಮೆದಾರರಾದ ಬಸವರಾಜ ದಲಾಲ ಅವರ 'ದಲಾಲ ಸ್ಪೋರ್ಟ್ಸ್ ಕ್ಲಬ್' ಸಭಾ ಭವನದಲ್ಲಿ ಶನಿವಾರ ಜರುಗಿದ ಪುಸ್ತಕಾವಲೋಕನ–58 ಕಾರ್ಯಕ್ರಮದಲ್ಲಿ ಚಾಮರಸ ಕವಿ ವಿರಚಿತ ಪ್ರಭುಲಿಂಗ ಲೀಲೆ ಕೃತಿಯನ್ನು ಅವಲೋಕಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದರು. ಈ ನೆಲದ ಸಾಹಿತ್ಯವನ್ನು ಉಳಿಸಬೇಕು ಎಂದರು.

ಉದ್ಯಮಿ ಬಸವರಾಜ ದಲಾಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನಮಾನಸದಲ್ಲಿ ಒಳ್ಳೆಯ ಸಂಸ್ಕೃತಿ, ಸಂಸ್ಕಾರ ತುಂಬುವ ಕಾರ್ಯಗಳಿಗೆ ಸದಾಕಾಲ ತಾವು ನೆರವು ನೀಡಲಾಗುವುದು ಎಂದರು. ನಮ್ಮ ತಾಲೂಕಿನಲ್ಲಿ ಕಸಾಪ ಕ್ರಿಯಾಶೀಲವಾಗಿದೆ ಎಂದರು.

ಕಸಾಪ ರಬಕವಿ–ಬನಹಟ್ಟಿ ತಾಲೂಕಾ ಅಧ್ಯಕ್ಷ ಮ. ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ 59ನೆಯ ಪುಸ್ತಕಾವಲೋಕನ ರಬಕವಿಯ ಸವಿತಾ ಹೊಸೂರ ಅವರ ನಿವಾಸದಲ್ಲಿ ನವೆಂಬರ್ 15 ರಂದು ನಡೆಯಲಿದೆ ಎಂದರು.

ದಲಾಲ ಕುಟುಂಬ ವರ್ಗ ಹಾಗೂ ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ನಿರಾಣಿ ಉದ್ಯಮ ಸಮೂಹದ ಅಧ್ಯಕ್ಷ ಸಂಗಮೇಶ ನಿರಾಣಿ, ಪ್ರಶಸ್ತಿ ಪುರಸ್ಕೃತ ಸತೀಶ ಹಜಾರೆಯವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಸಂವಾದದಲ್ಲಿ ಹಿರಿಯ ಸಾಹಿತಿ ಬಿ. ಆರ್. ಪೊಲೀಸ್ ಪಾಟೀಲ್, ಡಾ. ಚಂದ್ರಕಾಂತ ಹೊಸೂರ, ಡಾ. ರವಿ ಜಮಖಂಡಿ, ರವೀಂದ್ರ ಅಷ್ಟಗಿ ಪ್ರಶ್ನೆಗಳನ್ನು ಕೇಳಿದಾಗ, ಪೂಜ್ಯರು ಉತ್ತರಿಸಿದರು.

ಪ್ರೊ. ಎಮ್. ಎಸ್. ಬದಾಮಿ, ಡಾ. ಎ. ಕೆ. ನಾಡಗೌಡ ಪಾಟೀಲ, ಡಾ. ಜಿ. ಎಚ್. ಚಿತ್ತರಗಿ, ತೇರದಾಳ ಸಾವಯವ ಕೃಷಿಕ ಧರೆಪ್ಪ ಕಿತ್ತೂರ, ಗಿರೀಶ ಮುತ್ತೂರ, ಇಂದುಧರ ಬೆಳಗಲಿ,

ಡಿ. ಬಿ. ಜಾಯಗೊಂಡ, ಎಮ್. ಎಸ್. ಗಡೆನ್ನವರ, ವಿಜಯಕುಮಾರ ಹಲಕುರ್ಕಿ, ಗೌರಿ ಮಿಳ್ಳಿ, ಸವಿತಾ ಹೊಸೂರ, ಲಕ್ಷ್ಮಿ ನಿಂಬರಗಿ, ಭಾರತಿ ಪಾವಟೆ ಭಾಗವಹಿಸಿದ್ದರು.

ಮಹಾಲಿಂಗಪುರ ವಲಯ ಕಸಾಪ ಅಧ್ಯಕ್ಷ ಬಸವರಾಜ ಮೇಟಿ ವಚನ ಪ್ರಾರ್ಥನೆ ಹೇಳಿದರು.

ಹಿರಿಯ ಸಾಹಿತಿ ಶಿವಾನಂದ ದಾಶಾಳ ಸ್ವಾಗತಿಸಿದರು. ವಿರುಪಾಕ್ಷಪ್ಪ ಫಕೀರಪುರ, ಅಶೋಕ ಮಹಾಲಿಂಗಪುರ ಸೊಗಸಾಗಿ ನಿರೂಪಿಸಿದರು. ದಾನಪ್ಪ ಆಸಂಗಿ ವಂದಿಸಿದರು. ತಾಲೂಕಾ ಕಸಾಪ ಪದಾಧಿಕಾರಿಗಳು, ಹಿರಿಯ ಸಾಹಿತಿಗಳು, ಸಾಹಿತ್ಯಾಸಕ್ತರು, ಕಲಾವಿದರು ಬಹು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಬಂಡಿಗಣಿ ಶ್ರೀಗಳ ನಿಗೂಢ ಸಾವು; ಪ್ರಕರಣಕ್ಕೆ ಹೊಸ ತಿರುವು!

19 ಮಂದಿ ವಿರುದ್ಧ ಎಫ್‌ಐಆರ್; ಕೊಲೆ, ಸಾಕ್ಷ್ಯನಾಶದ ಆರೋಪ ಸೇರ್ಪಡೆಗೆ ನ್ಯಾಯಾಲಯ ಅಸ್ತು

ನವೆಂಬರ ಐದರೊಳಗೆ ಮುಂದಿನ ತನಿಖಾ ವರದಿ ಸಲ್ಲಿಸಲು ಸೂಚನೆ

ರಬಕವಿ–ಬನಹಟ್ಟಿ : ಉತ್ತರ ಕರ್ನಾಟಕದ ಐತಿಹಾಸಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಬಂಡಿಗಣಿ ಬಸವಗೋಪಾಲ ನೀಲಮಾಣಿಕ ಮಠದ ಶ್ರೀಗಳ ನಿಗೂಢ ಸಾವಿನ ಪ್ರಕರಣ ಇದೀಗ ನ್ಯಾಯಾಲಯದ ಮೆಟ್ಟಿಲೇರಿದ್ದು, ತನಿಖೆ ನಿರ್ಣಾಯಕ ಹಂತ ತಲುಪುವ ನಿರೀಕ್ಷೆ ಮೂಡಿಸಿದೆ. ಲಕ್ಷಾಂತರ ಭಕ್ತರನ್ನು ಹೊಂದಿರುವ ಮಠದ ಶ್ರೀಗಳ ಸಾವಿನ ಸುತ್ತ ಎದ್ದಿರುವ ಅನುಮಾನಗಳಿಗೆ ಉತ್ತರ ಸಿಗಲಿದೆ ಎಂಬ ಕುತೂಹಲ ಭಕ್ತ ವಲಯದಲ್ಲಿ ತೀವ್ರಗೊಂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬನಹಟ್ಟಿ ಸಿಪಿಐ, ಪೊಲೀಸ ಸಿಬ್ಬಂದಿ ಶಿವಾನಂದ ಹಿರೇಮಠ, ಅಲ್ಲಪ್ಪ ಗಣೇಶವಾಡಿ, ಹನಮಂತ ಚೌಗಲೆ ಸೇರಿದಂತೆ ಒಟ್ಟು 19 ಮಂದಿಯ ವಿರುದ್ಧ ಸಪ್ಟೆಂಬರ 17 ರಂದು ಎಫ್.ಐ.ಆರ್. ದಾಖಲಿಸಿದ್ದಾರೆಂದು ದೂರುದಾರರು ತಿಳಿಸಿದ್ದಾರೆ. ಸಾವಿನ ಸುತ್ತ ಅನುಮಾನದ ಹುತ್ತ! 2025ರ ನವೆಂಬರ್ 25ರಂದು ತೀವ್ರ ಅಸ್ವಸ್ಥಗೊಂಡಿದ್ದ ಶ್ರೀಗಳನ್ನು ಜಮಖಂಡಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೂಕ್ತ ಚಿಕಿತ್ಸೆ ಪಡೆಯಲು ಅಡ್ಡಿಪಡಿಸಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು ಬಂದಿದ್ದಲ್ಲದೆ, ಕುಟುಂಬದವರಿಗೂ ಭೇಟಿಗೆ ಅವಕಾಶ ನೀಡಿರಲಿಲ್ಲ ಎಂಬ ಗಂಭೀರ ಆರೋಪಗಳನ್ನು ದೂರುದಾರರು ಮಾಡಿದ್ದಾರೆ. ಶ್ರೀಗಳ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿರುವ ಕುಟುಂಬದವರು, ಕೊಲೆ, ನಕಲಿ ಮರಣ ಪ್ರಮಾಣಪತ್ರ ಸೃಷ್ಟಿ, ಸಾಕ್ಷ್ಯನಾಶ ಹಾಗೂ ಮಠದ ಕೋಟ್ಯಂತರ ಬೆಲೆ ಬಾಳುವ ವಸ್ತುಗಳ ಕಳವು ಸೇರಿದಂತೆ ವಿವಿಧ ಆರೋಪಗಳ ಕುರಿತು ಖಾಸಗಿ ದೂರು ಸಲ್ಲಿಸಿದ್ದರು.



ಈ ಆರೋಪಗಳು ತನಿಖೆ ಮತ್ತು ನ್ಯಾಯಾಲಯದ ವಿಚಾರಣೆಯಲ್ಲಿ ಸಾಬೀತಾಗಬೇಕಿವೆ.

ಕೊಲೆ, ಸಾಕ್ಷ್ಯನಾಶ ಆರೋಪಗಳ ತನಿಖೆಗೆ ನ್ಯಾಯಾಲಯದ ಅಸ್ತು: ನ್ಯಾಯಾಲಯದ ನಿರ್ದೇಶನದಂತೆ ದಾಖಲಾದ ಪ್ರಕರಣದಲ್ಲಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103 (ಕೊಲೆ) ಮತ್ತು 238 (ಸಾಕ್ಷ್ಯನಾಶ) ಸೇರ್ಪಡೆಗೆ ಸಪ್ಟೆಂಬರ 22 ರಂದು ಅನುಮತಿ ದೊರೆತಿದೆ. ಪ್ರಕರಣದ ಮುಂದಿನ ತನಿಖೆ ನಡೆಸಿ ವರದಿ ಸಲ್ಲಿಸಲು ನವೆಂಬರ್ ಐದರ ಗಡುವು ನಿಗದಿಪಡಿಸಲಾಗಿದೆ. ಕೊಲೆ ಮತ್ತು ಸಾಕ್ಷ್ಯನಾಶದಂತಹ ಗಂಭೀರ ಆರೋಪಗಳು ಪ್ರಕರಣಕ್ಕೆ ಹೊಸ ತಿರುವು ನೀಡಿದ್ದು, ತನಿಖಾಧಿಕಾರಿಗಳ ಮುಂದಿನ ನಡೆ ಕುತೂಹಲ ಕೆರಳಿಸಿದೆ. ಶ್ರೀಗಳ ಸಾವಿನ ಹಿಂದಿನ ನೈಜ ಕಾರಣವೇನು ? ಅವರ ಸಾವಿನ ಸುತ್ತ ಕೇಳಿ ಬಂದಿರುವ ಅನುಮಾನಗಳಿಗೆ ತನಿಖೆಯಲ್ಲಿ ಉತ್ತರ ಸಿಗಲಿದೆಯೇ ? ಎಂಬ ಪ್ರಶ್ನೆಗಳಿಗೆ ತನಿಖೆಯೇ ಉತ್ತರ ನೀಡಬೇಕಿದೆ.

ಭಕ್ತರ ದೃಷ್ಟಿ ಈಗ ತನಿಖೆಯತ್ತ: ಮಠದ ಶ್ರೀಗಳ ಸಾವಿನ ಪ್ರಕರಣದಲ್ಲಿ ಕೇಳಿ ಬಂದಿರುವ ಆರೋಪಗಳು ಸತ್ಯವೇ, ಅಸತ್ಯವೇ ಎಂಬುದು ತನಿಖೆ ಮತ್ತು ನ್ಯಾಯಾಂಗ ವಿಚಾರಣೆಯಿಂದ ಸ್ಪಷ್ಟವಾಗಬೇಕಿದೆ.

ನವೆಂಬರ್ ಐದರೊಳಗೆ ಸಲ್ಲಿಕೆಯಾಗಲಿರುವ ಮುಂದಿನ ತನಿಖಾ ವರದಿ ಪ್ರಕರಣದ ಮುಂದಿನ ಬೆಳವಣಿಗೆಗೆ ಮಹತ್ವದ ಘಟ್ಟವಾಗುವ ನಿರೀಕ್ಷೆಯಿದೆ.

Printed by Published by ASHWARYA PALLATE on behalf of ASHWARYA PALLATE, Printed at DHARIDEEPA PRINTERS & PUBLISHERS, NO. 74, 4TH MAIN, 7TH CROSS NEAR CHOWDESHWARI TEMPLE, KAVERINAGAR, MAHADEVAPURA, BENGALURU, KARNATAKA - 560048. and Published at BASAVESHWAR CIRCLE, 4TH CROSS, NEKAR NAGAR, HUBLI, OLD HUBLI, DHARWAD, KARNATAKA - 580024. Editor ASHWARYA PALLATE